March 1974 ದಿನ ಏನಿದೆ, ಈ ಒಂದು ಚಾರಿತ್ರಿಕ ದಿನದ ಮಹತ್ವವನ್ನು ಕಳೆದಹಾಗೆ ಆಗುತ್ತದೆ, ಆಲ್ಲದೆ ವಾಸ್ತವಾಂಶಕ್ಕೂ ಅದು ದೂರವಾಗಿದೆ. ಆದುದರಿಂದ ಮಾನ್ಯ ಮಂತ್ರಿಗಳು ತಂದಿರತಕ್ಕದ್ದು ಸೂಕ್ತವಾಗಿದೆ ಎನ್ನುವುದು ನನ್ನ ಅಭಿಪ್ರಾಯ.

ಶ್ರೀ ಟಿ. ಆರ್. - ಶಾಮಣ್ಣ.—ಒಟ್ಟಿನಲ್ಲಿ ನಮಗೆ ಅನ್ನ ಕೊಡತಕ್ಕ ರೈತನ ಬಾಳು ಚೆನ್ನವಾಗಲೀ, ದೇಶಕ್ಕೆ ಒಳ್ಳೆಯದಾಗಲೀ ಎನ್ನುವ ಉದ್ದೇಶದಿಂದ ಈ ಅಮೆಂಡ್‌ಮೆಂಟ್‌ನ್ನು ಪಾಪಸ್ ತೆಗೆದುಕೊಳ್ಳುತ್ತೇನೆ.

The amendment was by leave of the House withdrawn

MR. SPEAKER,—The question is :

"That Clause 1, the Long Title, Preamble and the Enacting Formula do stand part of the Bill".

The Motion was adopted

(Clause 1, the long Title, Preamble and the Enacting Formula were added to the Bill).

Motion to pass

SRI B. BASAVALINGAPPA.—I move :

"That the Karnataka Land Reforms (Amendment) Bill, 1978, as amended be passed."

MR. SPEAKER.—The question is :

"That the Karnataka Land Reforms (Amendment) Bill, 1978, as amended, be passed."

The motion was adopted and the Bill as amendment was passed

MR. SPEAKER.—We shall take up the next Bill.

KARNATAKA VILLAGE PANCHAYATS AND LOCAL BOARDS (SECOND AMENDMENT) BILL, 1978

Motion to Consider

SRI K. PRABHAKAR (Minister for Rural Development and Panchayat Raj). — I move :

"That the Karnataka Village Panchayats and Local Boards (Second Amendment) Bill, 1978, be taken into consideration."

The question was proposed

ಶ್ರೀ ಕೆ. ಪ್ರಭಾಕರ್ (ಗ್ರಾಮಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವರು).—ಮಾನ್ಯ ಅಧ್ಯಕ್ಷರೇ, ಗ್ರಾಮಪಂಚಾಯಿತಿಗಳಿಗೆ ಹಾಗೂ ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಗೆ ಸಂಬಂಧಪಟ್ಟಂತೆ ಈ ಕಾನೂನು ಜಾರಿಗೆ ಬಂದಿದ್ದು ೧೯೫೦ ನೇ ಇಸವಿಯಲ್ಲಿ. ಅಂದಮೇಲೆ ೧೯-೨೦ ವರ್ಷಗಳಿಂದ ಆ ಕಾನೂನು ಜಾರಿಯಲ್ಲಿದ್ದಾಗ್ಗೆ ಅದರ ಪರಿಪಾಲನೆ ಮತ್ತು ಪ್ರಜಾಸೇವೆಯಲ್ಲಿ ಆ ಕಾನೂನಿನ ಇರುವಿಕೆಯಿಂದ ಆಗುತ್ತಿದ್ದಂಥ ಅನುಕೂಲ ಅನಾನುಕೂಲಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಸೂಕ್ತರೀತಿಯಲ್ಲಿ

ಬದಲಾವಣೆಗಳನ್ನು ಮಾಡಿಕೊಂಡು ಅವುಗಳನ್ನು ಹೆಚ್ಚು ಸಮನ್ವಯ ರೀತಿಯಲ್ಲಿ ಅನ್ವಯಿಸಿ, ಪ್ರಜೆಗಳಿಗೆ ಹೆಚ್ಚಿನ ಅನುಕೂಲಗಳನ್ನು ಮಾಡಿಕೊಡಬೇಕು ಎನ್ನುವ ಉದ್ದೇಶದಿಂದ ಈ ಕೆಲವು ಬದಲಾವಣೆಗಳನ್ನು ಈ ಕಾನೂನಿನಲ್ಲಿ ಮಾಡಿದ್ದೇವೆ. ಅವುಗಳಲ್ಲಿ ಕೆಲವು ಬಹುಮುಖ್ಯವಾದಂಥ ಬದಲಾವಣೆಗಳನ್ನು ಪ್ರಸ್ತಾಪ ಮಾಡುವುದಾದರೆ, ಪರಿಶಿಷ್ಟ ವರ್ಗದ ಜನರಿಗೆ ಪ್ರತ್ಯೇಕವಾದ ಪ್ರಾತಿನಿಧ್ಯ ಇಲ್ಲದೇ ಅನ್ಯಾಯವಾಗುತ್ತಿದೆ ಎಂದು ಅವರು ತಮ್ಮ ನೋವನ್ನು ಸರ್ಕಾರಕ್ಕೆ ತಿಳಿಸಿದಮೇಲೆ ಅವರ ಪ್ರಜಾಸಂಖ್ಯೆಗನುಗುಣವಾದ ರೀತಿಯಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಹಾಗೂ ಪಂಚಾಯಿತಿ ಚುನಾವಣೆಗಳಲ್ಲಿ ಸೂಕ್ತವಾದ ಪ್ರಾತಿನಿಧ್ಯವನ್ನು ದೊರಕಿಸಿಕೊಡಬೇಕು ಎನ್ನುವುದು ಒಂದು.

೪-೩೦ ಪಿ.ಎಂ.

ಇತ್ತೀಚಿನ ಚುನಾವಣಾ ಕ್ರಮಗಳಲ್ಲಿ ತಾಲ್ಲೂಕ್ ಅಭಿವೃದ್ಧಿ ಮಂಡಳಿಗಳಲ್ಲಿ ಚುನಾವಣೆಗಳು ಆಗುತ್ತಿವೆ. ೪ ವರ್ಷಕ್ಕೊಂದು ಸಾರಿ ಇದ್ದುದು ೫ ವರ್ಷಕ್ಕೊಂದು ಸಾರಿ ಇರುವ ರೀತಿಯಲ್ಲಿ ಈ ಒಂದು ಪದ್ಧತಿಯನ್ನು ಬದಲಾವಣೆ ಮಾಡಿದೆ. ಚುನಾವಣೆಗೆ ಸಂಬಂಧಪಟ್ಟ ಹಾಗೆ ಅಭ್ಯರ್ಥಿ ಯಾರು ಇದ್ದಾರೆ ಅವರನ್ನು ಶಿಕ್ಷೆ ರೂಪದಲ್ಲಿ ಚುನಾವಣೆಯಿಂದ ಬೇರ್ಪಡಿಸಿ ಅಥವಾ ಹೊರಗೆ ಇಟ್ಟರೆ, ಆದರ ಅವಧಿ ೬ ವರ್ಷ ಇರಬೇಕು ಎನ್ನುವ ಚಿಕ್ಕ ಬದಲಾವಣೆ ಮಾಡಿದ್ದೇವೆ. ಈ ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕ್ ಬೋರ್ಡ್ ಮಂಡಳಿಗಳು ವ್ಯವಸ್ಥಿತವಾಗಿ ಹರಿಜನ ಗಿರಿಜನರಿಗೆ ಮತ್ತು ಹಿಂದುಳಿದ ಜನರಿಗೆ ಮತ್ತು ಕೇವಲ ಬಡವರಿಗೆ ಒಂದು ಸೇವೆಯನ್ನು ಮಾಡುವುದಕ್ಕಾಗಿ ಮತ್ತು ಅವರಿಗಾಗಿ ಒಂದು ಅತ್ಯಂತ ಶ್ರದ್ಧೆಯಿಂದ ಕಾರ್ಯ ನಡೆಯಬೇಕು ಎನ್ನುವ ದೃಷ್ಟಿಯಿಂದ ಈ ಮಸೂದೆಯನ್ನು ತಂದಿದ್ದೇವೆ. ಸ್ಥಳೀಯ ಸಂಸ್ಥೆಗಳಲ್ಲಿಯೂ ಕೂಡ ಅವರ ಬಗ್ಗೆ ಹೆಚ್ಚಿನ ಶ್ರದ್ಧೆ ಅವಶ್ಯಕತೆ ಇದೆ ಎನ್ನುವ ದೃಷ್ಟಿಯಿಂದ ಈ ಮಸೂದೆಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಿದ್ದೇವೆ. ಮತ್ತು ಇತ್ತೀಚೆಗೆ ಪ್ರಾಥಮಿಕ ಶಾಲೆಗಳಲ್ಲಿ ಮತ್ತು ಶಿಶುವಿಹಾರಗಳನ್ನು ಸರ್ಕಾರದವರು ಬಹಳ ಶ್ರದ್ಧೆಯಿಂದ ನಡೆಸುತ್ತಿದ್ದೇವೆ. ನಾವು ಅಷ್ಟೇ ಶ್ರದ್ಧೆ ವಹಿಸಿ ತಾಲ್ಲೂಕ್ ಬೋರ್ಡ್‌ನಲ್ಲೂ ಹಾಗೂ ಗ್ರಾಮ ಪಂಚಾಯಿತಿಗಳಲ್ಲಿಯೂ ಕೂಡ ಅಂತಹ ಪ್ರಾಥಮಿಕ ಶಾಲೆಗಳು ಮತ್ತು ಶಿಶುವಿಹಾರಗಳನ್ನು ಆಲ್ಲಿ ನಡೆಸಬೇಕು, ಈ ಶಾಲೆಗಳ ಉಪಯೋಗ ಹೆಚ್ಚಿನ ಜನತೆಗೆ ಆಗಬೇಕು ಎನ್ನುವ ದೃಷ್ಟಿಯಿಂದ ಪಂಚಾಯಿತಿ ಮತ್ತು ತಾಲ್ಲೂಕು ಬೋರ್ಡ್‌ಗಳಿಗೆ ಈ ತರಹ ಶಾಲೆಗಳ ಏರ್ಪಾಡು ಮಾಡಿದ್ದೇವೆ. ಈ ಕಾರ್ಯದಲ್ಲಿ ತಾಲ್ಲೂಕು ಬೋರ್ಡ್ ಮತ್ತು ಗ್ರಾಮಪಂಚಾಯಿತಿಗಳ ಸೇವೆ ಅತ್ಯಾವಶ್ಯಕವಿದೆ ಇದರಲ್ಲಿ ಅವರ ಒಂದು ಕಾರ್ಯ ಬದಲಾವಣೆ ಇನ್ನು ಹೆಚ್ಚು ಹೆಚ್ಚಾಗಬೇಕು ಎನ್ನುವದೃಷ್ಟಿಯಿಂದ ಈ ಮಸೂದೆಯಲ್ಲಿ ಅವರ ಪಾತ್ರವನ್ನು ಅಳವಡಿಸಿದ್ದೇವೆ. ಮತ್ತೆ ಜಿಲ್ಲಾಧಿಕಾರಿಗಳಿಗೆ ಯಾವುದಾದರೂ ಒಂದು ಸಂದರ್ಭದಲ್ಲಿ ಒಂದು ಪಂಚಾಯಿತಿ ಹಾಗೂ ತಾಲ್ಲೂಕ್ ಬೋರ್ಡ್ ಮಂಡಳಿಯ ಸದಸ್ಯರು ಏಕಾಏಕಿ ಅಲ್ಲಿಯ ಸ್ಥಳೀಯ ರಾಜಕೀಯ ವಿದ್ಯಾಮಾನಗಳಿಂದ ರಾಜೀನಾಮೆ ಕೊಟ್ಟಾಗ ಅಲ್ಲಿ ಒಬ್ಬರೂ ಇಲ್ಲದೆ ಹೋದಂಥ ಸಂದರ್ಭದಲ್ಲಿ ಅಲ್ಲಿಯ ಒಂದು ಮೇಲ್ವಿಚಾರಿಕೆಯನ್ನು ನೋಡಿಕೊಳ್ಳಲು ಅಲ್ಲಿ ವಿಶೇಷ ಅಧಿಕಾರಿಯನ್ನು ನೇಮಕ ಮಾಡತಕ್ಕ ಒಂದು ಸಂದರ್ಭ ಬೇಕಾಗಿತ್ತು. ಅದಕ್ಕೆ ಕಾನೂನಿನಲ್ಲಿ ಅವಕಾಶವಿರಲಿಲ್ಲ ಎನ್ನುವುದನ್ನು ತಿಳಿದು ಅದಕ್ಕೆ ಅವಕಾಶವನ್ನು ಮಾಡಿದ್ದೇವೆ.

(ಶ್ರೀ ಜಿ. ಪಿ. ಒಡೆಯರಾಜ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಮತ್ತೆ ಚುನಾವಣೆ ನಡೆಸತಕ್ಕ ವಿಚಾರದಲ್ಲಿ ಹೇಳುವುದಾದರೆ ಈ ಪಂಚಾಯಿತಿ ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಳಿಗಳಲ್ಲಿ ಎರಡರಲ್ಲೂ ಕೂಡ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಗೆದ್ದು ಬಂದ ವೇಳೆಯಲ್ಲಿ ಅವರು ಸರಿಯಾದ ಒಂದು ಮಾರ್ಗವನ್ನು ಅನುಸರಿಸಿ ಗೆದ್ದು ಬರಲಿಲ್ಲ ಎನ್ನುವ ವಿಚಾರವನ್ನು ಕುರಿತು ಅವರು ಚುನಾವಣೆ ರದ್ದುಗೊಳಿಸಬೇಕು ಎನ್ನತಕ್ಕ ವಿಚಾರದಲ್ಲಿ ಕಾನೂನಿನಲ್ಲಿ ಅವಕಾಶವಿರಲಿಲ್ಲ, ಒಂದು ವೇಳೆ ಮುಂದುವರಿದು ಅವಕಾಶ ಮಾಡಿಕೊಟ್ಟರೂ ಯಾವ ಕಾರಣದ ಮೇಲೆ ನಾವು ಅರ್ಜಿಯನ್ನು ತೆಗೆದುಕೊಳ್ಳಬೇಕು ಎನ್ನತಕ್ಕದ್ದು ಚುನಾವಣಾ ಅಧಿಕಾರಿಗಳಿಗೆ, ಅದಕ್ಕೆ ಸಂಬಂಧಪಟ್ಟವರಿಗೆ ಅದು ಕಾನೂನಿನ ತೊಡಕಿನ ಸಮಸ್ಯೆ ಆಗಿದ್ದರಿಂದ ಅವರು ಏನಾದರೂ ನೈತಿಕವಾಗಿ ಮತ್ತು ಧಾರ್ಮಿಕ ದಿಶೆಯಿಂದ ತಾವು ಗೆದ್ದುಬಂದಿದ್ದೇವೆ ಎನ್ನುವ ಅಂಶವಿದ್ದರೆ ಮಾತ್ರ ಅರ್ಜಿಯನ್ನು ತೆಗೆದುಕೊಳ್ಳಬಹುದು ಬೇರೆ ರೀತಿಯಲ್ಲಾದರೆ ಇಲ್ಲ ಎನ್ನುವುದು ಅಳವಡಿಸಬೇಕಾಗಿದೆ. ಇತ್ತೀಚೆಗೆ ದೀನ ದಲಿತರ ಮತ್ತು ಬಡವರ, ಹರಿಜನರಗಿರಿಜನರ ಪುರೋಭಿವೃದ್ಧಿ ವಿಶೇಷವಾಗಿ ನಡೆಯಬೇಕು ಎನ್ನತಕ್ಕದ್ದು ಎಲ್ಲಾ ಸರ್ಕಾರಗಳ ಅಂದರೆ ಕೇಂದ್ರ ಸರ್ಕಾರದ ಹಾಗೂ ರಾಜ್ಯ ಸರ್ಕಾರಗಳ ಗುರಿ ಆದ ಮೇಲೆ ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಮಟ್ಟದಲ್ಲಿ ಮತ್ತು ಪಂಚಾಯಿತಿಗಳ ಮಟ್ಟದಲ್ಲಿ ಅದರ ಪುರೋಭಿ

ವೃದ್ಧಿಗೆ ಕೆಲಸ ಮಾಡಲಿಕ್ಕೆ ಒಂದು ನಿಖರವಾದ ಒಂದು ಸಮಿತಿ ಇರಬೇಕು ಎನ್ನುವುದು ಅತ್ಯಾವಶ್ಯಕವಾಗಿದೆ ಎನ್ನುವುದನ್ನು ಅರಿತು ಅದನ್ನು ಅಳವಡಿಸಿದ್ದೇವೆ ಮತ್ತು ಬೆಂಗಳೂರು ನಗರದಂಥ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ವಾಸ ಮಾಡತಕ್ಕ ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರು ಮತ್ತು ಶಾಸನ ಸಭೆಯ ಶಾಸಕರುಗಳು ಆ ಭಾಗದಲ್ಲಿರತಕ್ಕ ತಾಲ್ಲೂಕಿನಲ್ಲಿ ಎಷ್ಟರಮಟ್ಟಿಗೆ ಭಾಗವಹಿಸಿದ್ದರೆ ಮತ್ತು ಯಾವ ಕಾರ್ಯಕ್ರಮವನ್ನು ನಡೆಸಬೇಕು ಯಾವ ಕಾರ್ಯಕ್ರಮದಲ್ಲಿ ಅವರು ಭಾಗವಹಿಸಬೇಕು ಎನ್ನುವ ಬಗ್ಗೆ ಕಾನೂನಿನಲ್ಲಿ ಸರಿಯಾದ ವ್ಯವಸ್ಥೆ ಇರಲಿಲ್ಲ. ಅದಕ್ಕೆ ಒಂದು ವ್ಯವಸ್ಥಿತವಾದ ರೀತಿಯಲ್ಲಿ ನಾವು ಮಾಡಿದ್ದೇವೆ ಮತ್ತು ತಾಲ್ಲೂಕ್ ಅಭಿವೃದ್ಧಿ ಮಂಡಳಿಗಳಲ್ಲಿಯ ಕಾರ್ಯಕಲಾಪಗಳಲ್ಲಿ ಯಾವರೀತಿ ಭಾಗ ವಹಿಸಬೇಕು ಮತ್ತು ಯಾವ ಸದಸ್ಯರು ಓಟ್ ಮಾಡಬಹುದು ಎನ್ನುವ ಬಗ್ಗೆ ನಿರ್ಧರಿಸಲು ಯಾವ ವಿಧಾನ ಪರಿಷತ್ ಸದಸ್ಯರು ಎಲ್ಲಿಂದ ಆವರು ಗೆದ್ದು ಬಂದಿರುತ್ತಾರೆ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ಮತ್ತು ಅವರು ಎಲ್ಲಿ ವಾಸ ಮಾಡುತ್ತಾರೋ ಆ ಒಂದು ತಾಲ್ಲೂಕ್ ಅಭಿವೃದ್ಧಿಯ ಮಂಡಳಿಯ ಸರಹದ್ದಿನಲ್ಲಿ ಮಾತ್ರ ಆವರು ಭಾಗ ವಹಿಸಬೇಕು ಎನ್ನುವುದನ್ನು ಅಳವಡಿಸಲಾಗಿದೆ.

ಇನ್ನು ಪ್ರೊಫೆಷನಲ್ ಟ್ಯಾಕ್ಸ್‌ನ್ನು ಅವರು ವಸೂಲು ಮಾಡಬೇಕಾಗಿತ್ತು ಆದರೆ ಸರ್ಕಾರದವರು ಬೇರೆ ಒಂದು ಕಾಯಿದೆ ಮಾಡಿ ಆದನ್ನು ವ್ಯವಸ್ಥಿತವಾದ ರೀತಿಯಲ್ಲಿ ವಸೂಲು ಮಾಡತಕ್ಕ ಪದ್ಧತಿಯನ್ನು ತಂದಿದೆ. ಆ ಒಂದು ಪದ್ಧತಿ ಇರುವುದರಿಂದ ಸ್ಥಳೀಯ ಸಂಸ್ಥೆಗಳು ಈ ತೆರಿಗೆಯನ್ನು ವಸೂಲಿ ಮಾಡತಕ್ಕ ಅಧಿಕಾರವನ್ನು ಇಟ್ಟುಕೊಂಡಿರತಕ್ಕದ್ದು ಲಾಭವಲ್ಲ ಅದು ಸರಿಯಲ್ಲ ಎನ್ನುವ ದೃಷ್ಟಿಯಿಂದ ಆ ಒಂದು ಅಧಿಕಾರವನ್ನು ಮನ್ನಾ ಮಾಡಿದ್ದೇವೆ. ಮತ್ತು ಸ್ಥಳೀಯ ಸಂಸ್ಥೆಗಳು ಅವುಗಳ ಕಾರ್ಯಕಲಾಪಗಳು ಚೆನ್ನಾಗಿ ನಡೆಯಬೇಕಾದರೆ ಹಣದ ಅನುಕೂಲ ಸಾಕಷ್ಟು ಇಲ್ಲ ಎನ್ನುವುದನ್ನು ಸರ್ಕಾರ ಮನಗೊಂಡು ಯಾವುದಾದರೂ ಒಂದು ರೀತಿಯಲ್ಲಿ ಅವುಗಳಿಗೆ ಹಣದ ಸಹಾಯ ಮಾಡಿಕೊಡಬೇಕು ಎನ್ನುವ ದೃಷ್ಟಿಯಲ್ಲಿ ಅವರಿಗೆ ಇದ್ದಂಥ ಕಾರ್ಯ ಕಂದಾಯ ಹಾಕತಕ್ಕಂಥ ಹಕ್ಕು ಏನಿದೆ—ಭೂ ಕಂದಾಯ ಪ್ರತಿಯೊಂದು ರೂಪದಲ್ಲೂ ೧೨ ಪೈಸೆ ಕಂದಾಯವನ್ನು ಮಾತ್ರ ಹಾಕತಕ್ಕ ಅಧಿಕಾರವನ್ನು ನಾವು ಕೊಟ್ಟಿದ್ದೆವು. ಆದರೆ ಈಗ ಆ ಅಧಿಕಾರವನ್ನು ಹೆಚ್ಚಿಸಬೇಕು ಎನ್ನುವ ದೃಷ್ಟಿಯಿಂದ ೧೨ ಪೈಸೆ ಇದ್ದುದನ್ನು ೫೦ ಪೈಸೆವರೆಗೆ ಕಂದಾಯವನ್ನು ಹಾಕಿ ಆದರಿಂದ ಬರತಕ್ಕ ಹಣದಿಂದ ಗ್ರಾಮ ಪಂಚಾಯಿತಿಯವರು ಮತ್ತು ತಾಲ್ಲೂಕ್ ಬೋರ್ಡ್ ಮಂಡಳಿಯವರು ಆದನ್ನು ಉಪಯೋಗಿಸಿಕೊಂಡು ತಮ್ಮ ಕಾರ್ಯ ಕಲಾಪಗಳನ್ನು ಇನ್ನು ಹೆಚ್ಚಿನ ರೀತಿಯಲ್ಲಿ ನಡೆಸಬೇಕು ಎನ್ನುವ ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಹೀಗೆ ಮಾಡುವುದರಿಂದ ಅವರಿಗೆ ಮಾಮೂಲಿ ಭೂ ಕಂದಾಯ ಹಣದಿಂದ ಪಂಚಾಯಿತಿಗಳಿಗೆ ೬ ಕೋಟಿ ೪೦ ಲಕ್ಷ ಮತ್ತು ತಾಲ್ಲೂಕ್ ಬೋರ್ಡ್‌ಗಳಿಗೆ ೬೦ ಲಕ್ಷ ಬರುತ್ತದೆ ಆದನ್ನು ನಾವು ಮನ್ನಾ ಮಾಡಿಲ್ಲ, ಇದರಿಂದ ಇಷ್ಟು ಅವರಿಗೆ ಹೆಚ್ಚಿನ ವರಮಾನ ಬರತಕ್ಕದ್ದಾಗಿದೆ. ಇನ್ನು ಒಂದೊಂದು ಸಲ ಬೆಂಗಳೂರು ನಗರ ಮುಂತಾದ ಪಟ್ಟಣಗಳ ಎಲ್ಲೆಯನ್ನು ಕಾರಣಾಂತರಗಳಿಂದ ವಿಸ್ತರಿಸತಕ್ಕ ಕಾಲದಲ್ಲಿ ಅದರ ಅಕ್ಕಪಕ್ಕದಲ್ಲಿರುವ ಗ್ರಾಮಗಳನ್ನು ಆ ನಗರಕ್ಕೆ ಸೇರಿಸಿಕೊಳ್ಳತಕ್ಕ ಸಂದರ್ಭ ಬಂದಾಗ ಅಲ್ಲಿರತಕ್ಕ ತಾಲ್ಲೂಕ್ ಅಭಿವೃದ್ಧಿ ಮಂಡಳಿಗಳ ವಿಸ್ತರಣೆ ಕಡಿಮೆ ಆಗುವ ದಿಶೆಯಿಂದ ಆ ಬೋರ್ಡ್‌ಗಳ ಕಾರ್ಯ ಪ್ರವೃತ್ತಿ ಕಡಿಮೆಯಾಗತಕ್ಕ ಸನ್ನಿವೇಶಗಳು ಉಂಟಾಗತಕ್ಕುದು ಇರುವುದರಿಂದ ಆ ದಿಶೆಯಿಂದ ನಾವು ಹೊಸದಾಗಿ ಆಯಾಯಾ ಒಂದು ನಗರದ ಭೂ ಮಂಡಳಿಗಳನ್ನು ರಚನೆ ಮಾಡುವಾಗ ಯಾರು ಹಿಂದೆ ತಾಲ್ಲೂಕು ಅಭಿವೃದ್ಧಿ ಮಂಡಳಿಗಳಲ್ಲಿ ಕಾರ್ಯ ಕಲಾಪಗಳಲ್ಲಿ ಭಾಗವಹಿಸುತ್ತಿದ್ದರೋ ಅವರನ್ನು ಪುನರ್‌ರಚಿತವಾದ ಬೋರ್ಡ್‌ಗಳಲ್ಲಿಯು ಅವರನ್ನು ನಾಮಕರಣ ಮಾಡತಕ್ಕದ್ದಕ್ಕೆ ಅವಕಾಶವಿರಲಿಲ್ಲ ಅವರು ಸಮಾಜಸೇವೆಯನ್ನು ಯಥಾ ಪ್ರಕಾರ ಮುಂದು ವರಿಸುವಂತೆ ಅವರಿಗೆ ಅವಕಾಶ ಮಾಡಿಕೊಡಲು, ಅವರನ್ನೇ ಮುಂದುವರಿಸಿ ನಾಮಕರಣ ಮಾಡಲು ಅವಕಾಶವಾಗುವಂತೆ ಒಂದು ತಿದ್ದುಪಡಿಯನ್ನು ತಂದಿದ್ದೇವೆ: ಹೀಗಾಗಿ ಕಾನೂನು ಜಾರಿಯಲ್ಲಿದ್ದಾಗಿನಿಂದ ಅದರಲ್ಲಿರುವ ತೊಡಕುಗಳನ್ನು ಅರಿತು, ಅಧಿಕಾರಿಗಳ ದೃಷ್ಟಿಯಿಂದ ಮತ್ತು ಸಮಾಜ ಸೇವಕರ ದೃಷ್ಟಿಯಿಂದ ಹಾಗೂ ಸರ್ಕಾರವ ನೀತಿಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಸಾಮಾನ್ಯ ಜನರ ಸೇವೆ ಸಲ್ಲಿಸುವ ದೃಷ್ಟಿಯಿಂದ ಯಾವಯಾವ ಭಾಗಗಳು ತೊಡಕಾಗಿದ್ದವೋ ಅವುಗಳನ್ನೆಲ್ಲಾ ಮನಸ್ಸಿನಲ್ಲಿಟ್ಟುಕೊಂಡು ಕೆಲವೊಂದು ಉಚಿತವಾದ ಬದಲಾವಣೆಗಳನ್ನು ಮಾಡಿದ್ದೇವೆ. ನಾವು ತಂದಿರತಕ್ಕ ತಿದ್ದುಪಡಿಯನ್ನು ಇನ್ನು ಹೆಚ್ಚಿನ ಬದಲಾವಣೆ ಏನೂ ಇಲ್ಲದೆ ಇರುವುದರಿಂದ ಮಾನ್ಯ ಸದಸ್ಯರುಗಳು ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಹೇಳಿ ವಿನಂತಿ ಮಾಡಿಕೊಳ್ಳುತ್ತೇನೆ.

† SRI M. V. RAJASEKHARAN (Uttarahalli).— Mr. Chalrman, Sir, when this Bill was moved, I was hoping that the Hon. Minister would bring before this House a very comprehensive Bill to restore the rights of village panchayats so that they can take very important responsibility of bringing about socio-economic transformation. But unfortunately I find that the Bill has been brought in a very lopsided way and particularly to serve a limited purpose. Though I feel that this Bill should be opposed, there are certain clauses which I wholeheartedly welcome Sir, as you know since 1969, we have been trying one of the very important institutions of democracy and we wanted to see that they function very effectively in this country; but to function very effectively, we have to also provide necessary funds, necessary administrative support and also the legal authority to do it. But unfortunately though we have been talking about the functioning of the panchayatiraj institutions in this country and also in this State, we have failed in our duty to take into account the many suggestions. many reports which have come not only before this House but also before the Government from time to time. We have totally neglected to give our a t ntion to those very good and useful suggestions and recommendations which were made in those reports. I would like to quote here our own report where the Government of Karnataka constituted a committee under the Chairmanship of Sri Kondaji Basappa in the year 1962 but this report has been kept in cold-storage. I do not think even the Minister has gone through this report because I see his total ignorance about this report when I went through this Bill.

First of all, let me take the opportunity to welcome certain clauses. I am really happy to read that they have proposed to set up a social justice committee at the village panchayat level. Mere declaration or providing some statutory recommendation is not going to fulfill the objective for which it is meant. Therefore, I would plead with this Government to give them the necessary financial support. I feel that this is a very good amendment which they have brought because everybody today is talking about giving social justice to the weaker sections. At the panchayat level, this justice has to be given to the people who have been suppressed all these centuries. I do not know how far the Government is sincere in giving statutory recomondation and also supporting with necessary finance When I see here in the amending Bill, very little attention has been paid to give sufficient finance to be kept at the disposal of the panchayatiraj institutions. Sir, I would like to make a suggestion to the Government; let all the land revenue be kept completely at the disposal of the panchayatiraj institutions if they are really sincere to see that these institution which are a vital part of the democratic structure in

this country were to function well. If they want to make there institutions work effectively, let the total land revenue which is now coming to the State treasury. go to the panchayati Raj institutions so that they can get enough funds to exercise their right and give social justice to the weaker sections. What are the funds that are kept at the disposal of the panchayats? I know most of the panchayats in the State today do not have funds even to pay the electricity charges; most of the villages to whom electric connections have been given are now in utter darkness after 6 P.M. In certain areas, I have seen a lot of money spent to give drinking water for which pumpsets have been installed and pipelines drawn up. Today the entire thing has come to a stop; no water is flowing through the pipelines because they say local bodies are in arrears, they are not able to pay their monthly electricity charges. When such is the situation in the State, how can you make these institutions work effectively to give social justice to the weaker sections? I would like to make a suggestion to the Government, Let them keep the entire land revenue at the disposal of the panchayatiraj institutions. Not only that, I would like to make one more suggestion. I today in the State, we derive more than Rs. 12 crores from the forest wealth. I would plead with this Government to atleast give 50% of the forest revenue to the panchayats. If we are to make any institution work effectively, the necessary financial support has to be given. More declaration of giving social justice will remains only as a pious declaration if we do not match it with sufficient funds.

SRI B. BASAVALINGAPPA.— The hon. member who has travelled abroad, may enlighten as about the social justice prevailing in other countries. This comparison is necessary.

SRI M. V. RAJASEKHARAN.— I thought ths Hon. Minister Sri Basavalingappa who is a via media between the intellectual and the social reformers, understands about social justice. My understanding and his understanding on this subject more or less the same. Without understanding, I do not think he would have brought an amendment to this Bill to give social justice and to have a committee at the village level for this purpose. Unfortunately Sri Basavalingappa is not in-charge of rural development. Now we have a very pious Minister. This is our difficulty. Anyway, Sir, let me not dilate further.

SRI B. BASAVALINGAPPA.—He is not very kind to us. He has mentioned my name and the name of my collage and has passed some remark which we cannot swallow; kindly he kind to us.

SRI M. V. RAJASEKHARAN.—I have not passed any unkind remark against anybody. I have told that the Minister for Rural Development is a very pious man.

SRI B. BASAVALINGAPPA.— How can you except a man at the age or 63 to be more effective?

ಶ್ರೀ ಕೆ. ಪ್ರಭಾಕರ್.—ವಯಸ್ಸಿಗೆ ಸಂಬಂಧಪಟ್ಟಹಾಗೆ ದಕ್ಷತೆ ಎಂಬುದರ ಬಗ್ಗೆ ಹೇಳುವಂತಹ ಸಂದರ್ಭ ಇಲ್ಲ. ಎರಡನೆಯದಾಗಿ ಬಹಳ ಒಳ್ಳೆಯವರು, ಆದರೆ ದಕ್ಷತೆಯಿಲ್ಲಿ ಇಲ್ಲ ಎಂಬುದಾಗಿ ಹೇಳುವುದಾದರೆ ಹಣ-ಗುಣ ಜೊತೆಯಲ್ಲಿ ಹೋಗುವುದಿಲ್ಲ. ಇದನ್ನು ಇನ್ನೆಂತಹ ಸಂದರ್ಭವೆಂದು ನನಗೆ ಗೊತ್ತಾಗದು. ದಕ್ಷತೆ ಎಂಬುದು ಕ್ರಮ ಬದ್ಧವಾಗಿ ಹಾಗೂ ಬಹಳ ಎಚ್ಚರಿಕೆಯಿಂದ, ನ್ಯಾಯ ದೃಷ್ಟಿಯಿಂದ ತನ್ನ ಕಾರ್ಯವನ್ನು ಪಾಲನೆ ಮಾಡಿಕೊಂಡು ಹೋಗತಕ್ಕಂಥಾದ್ದು ಒಳ್ಳೆಯತನ ಎಂದು ನಾವೆಲ್ಲರೂ ಕರೆದುಕೊಂಡು ಹೋಗುತ್ತಿದ್ದೇವೆ. ಗಂಡಗುಂಡಿ, ವಿಚಿತ್ರ, ಕಾತಂತ್ರ ಇವುಗಳೆಲ್ಲವನ್ನು ಸೇರಿಸಿ ಹೇಳಿದರೂ ಕೂಡ ಅದನ್ನು ನಾನು ಸಂತೋಷದಿಂದ ಒಪ್ಪಿಕೊಳ್ಳುತ್ತೇನೆ. ಆದರೆ ಮಾಡತಕ್ಕಂಥ ಕಾರ್ಯ ಏನಿದೆ ಅದನ್ನು ಮಾಡುವುದರಲ್ಲಿ ಅದ್ಯಕ್ಷರೆಂದು ಹೇಳುವುದಾದರೆ ಅದನ್ನು ನಾನು ಒಪ್ಪುವುದಿಲ್ಲ.

ಶ್ರೀ ಎಂ. ವಿ. ರಾಜಶೇಖರನ್.—ಬೇರೆ ಎಲ್ಲಾ ವಿಚಾರಗಳಲ್ಲೂ ಮಾನ್ಯ ಮಂತ್ರಿಯವರು ದಕ್ಷರಿದ್ದಾರೆ. ದುರ್ದೈವವಶಾತ್ ರೂರಲ್ ಡೆವಲಪ್‌ಮೆಂಟ್ ಇನ್ಸ್‌ಟಿಟ್ಯೂಷನ್ಸ್ ವಿಚಾರ ಬಂದಾಗ ಅಷ್ಟು ದಕ್ಷರಲ್ಲ ಎಂಬುದಾಗಿ ಹೇಳಿದರೆ ತಪ್ಪಾಗಲಾರದು.

However, I was pleading with you that they must take available the finances to the rural areas so that they can function effectively. Unless their hands are strengthened all the social and economic measures which this Government and the Central Government contemplates will not help these people. Unless the people at the grass root levels are given the right to implement the schemes meant for rural development people will not be benefits. After 30 years of independence yon donot see a single new house in the villages. You will see all the houses which were there since 40–50 years back. But if you visit Bangalore city after six months or after the closure of this session you can see a lot of changes and so many buildings coming up. Why this is so? Because the village people have no voice today.

ಶ್ರೀ ಡಿ. ಟಿ. ರಾಮು.—ಬರೀ ಬಿಲ್ಡಿಂಗ್‌ಗಳು ಬರುತ್ತಿರುವುದರಿಂದ ಪಟ್ಟಣ ಅಭಿವೃದ್ಧಿಯಾಗಿದೆ ಎಂಬುದಾಗಿ ತಿಳಿಯುತ್ತೀರಾ?

ಶ್ರೀ ಎಂ. ವಿ. ರಾಜಶೇಖರನ್.—ಎಲ್ಲ ಪಟ್ಟಣಗಳಲ್ಲಿ ಬೆಳೆಯುತ್ತಿದೆ. ಹಳ್ಳಿಗಳು ಅಭಿವೃದ್ಧಿಯಾಗುತ್ತಿಲ್ಲ. ಕಾರಣ ಏನು ಅಂದರೆ ಹಳ್ಳಿ ಜನಗಳಿಗೆ ಸಾಕಷ್ಟು ಅನುಕೂಲತೆಗಳು ಇಲ್ಲ. ಸಾಕಷ್ಟು ಹಣ ಇಲ್ಲ. ಯಾವುದೇ ಪಂಚಾಯಿತಿಗಳಿಗೂ ಅವರು ಎಲೆಕ್ಟ್ರಿಸಿಟಿ ಬಿಲ್ಲನ್ನು ಕೂಡ ಕಟ್ಟುವುದಕ್ಕಾಗುವುತ್ತಿಲ್ಲ. ಕುಡಿಯುವ ನೀರಿನ ಪಂಪ್‌ಸೆಟ್ ಇರುತ್ತದೆ. ಆ ಪಂಪ್‌ಸೆಟ್ಟಿಗೆ ಉಪಯೋಗಿಸುತ್ತಿರುವ ಎಲೆಕ್ಟ್ರಿಸಿಟಿ ಬಿಲ್ಲನ್ನು ಕಟ್ಟುವುದಕ್ಕಾಗುತ್ತಿಲ್ಲ. ಮಾನ್ಯ ಡಿ. ಟಿ. ರಾಮುರವರು ಹಳ್ಳಿಯಿಂದ ಬಂದಿದ್ದಾರೆ ಆದೇ ರೀತಿ ಶ್ರೀಮಾನ್ ಅಪ್ಪಾಜಿಯವರೂ ಕೂಡ ಹಳ್ಳಿಯಿಂದ ಬಂದಿದ್ದಾರೆ ಶ್ರೀಮಾನ್ ಅಪ್ಪಾಜಿಯವರು ತಾಲ್ಲೂಕು ಬೋರ್ಡಿನ ಅಧ್ಯಕ್ಷರೂ ಕೂಡ ಆಗಿದ್ದರು. ಪಂಚಾಯಿತಿಗಳು ಯಾವ ರೀತಿ ನಡೆಯುತ್ತಿವೆ ಎಂಬುದು ಅವರಿಗೆ ಗೊತ್ತಿದೆ. ಇವತ್ತಿನದಿವಸ ಯಾವ ಪಂಚಾಯಿತಿಗಳೇ ಆಗಿರಲಿ ಅವು ಸತ್ವಪೂರ್ಣವಾಗಿ ಕೆಲಸ ಮಾಡಬೇಕಾದರೆ ದಕ್ಷತೆಯಿಂದ ಕೆಲಸ ಮಾಡಬೇಕಾದರೆ ಹಳ್ಳಿಗಳಲ್ಲಿರತಕ್ಕಂಥ ಜನಗಳು ಎನಿದ್ದಾರೆ ಅವರಿಗೆ ಸಾಕಷ್ಟು ಅನುಕೂಲ ಸಿಕ್ಕಬೇಕಾಗಿದೆ. ಸಾಕಷ್ಟು ಸಂಪನ್ಮೂಲಗಳನ್ನು ಅವರಿಗೆ ಒದಗಿಸಿ ಕೊಡಬೇಕು. ಇದು ಮುಖ್ಯವಾಗಿ ಹಳ್ಳಿಯಲ್ಲಿರುವ ಜನಗಳಿಗೆ ಆಗಬೇಕು. ನಿನ್ನೆ-ಮೊನ್ನೆ ಪತ್ರಿಕೆಯಲ್ಲಿ ಬಂದಿದ್ದ ಸಂಗತಿಯನ್ನು ಓದಿದ್ದೇನೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ದೆಹಲಿಗೆ ಹೋಗಿದ್ದಾಗ ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಮೀಟಿಂಗ್‌ನಲ್ಲಿ ರಾಜ್ಯಗಳಿಗೆ ಕೇಂದ್ರದಿಂದ ಏನು ಹಣ ಬರುತ್ತಿದೆ ಆ ಹಣ ಸಾಕಾಗುತ್ತಿಲ್ಲ. ಇನ್ನೂ ಹೆಚ್ಚಿಗೆ ಹಣವನ್ನು ಕೊಡಬೇಕೆಂಬ

ಮಾತನ್ನು ಹೇಳಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಈ ಟ್ಯಾಕ್ಸ್ಸ್ ಹಾಕುವ ಪದ್ಧತಿ ಏನಿದೆ ಅದು ಸಂಪೂರ್ಣ ಬದಲಾವಣೆ ಮಾಡಬೇಕೆಂದು ಕಳೆದ ೩ ಮೂರು ದಿವಸಗಳಿಂದಲೂ ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಮೀಟಿಂಗ್‌ನಲ್ಲಿ ಕುಳಿತುಕೊಂಡು ಮಾತನಾಡಿದ್ದಾರೆ. ಹಾಗೂ ಕೇಂದ್ರ ಸರ್ಕಾರದವರ ಜೊತೆಯಲ್ಲೂ ಮಾತನಾಡಿದ್ದಾರೆ. ಹಾಗೂ ಪ್ಲಾನಿಂಗ್ ಕಮೀಷನ್ ಜೊತೆಯಲ್ಲೂ ಕೂಡ ಮಾತನಾಡಿ ಬಂದಿದ್ದಾರೆ. ಹೀಗೆ ಹೇಳಿದವರು ಇವರು ಏನು ಮಾಡುತ್ತಿದ್ದಾರೆ ?

ಶ್ರೀ ಬಿ. ಬಸವಲಿಂಗಪ್ಪ.—ಕೇಂದ್ರದಲ್ಲಿ ಜನತಾ ಪಾರ್ಟಿ ಸರ್ಕಾರ ಇದೆ. ಆದ್ದರಿಂದ ಅವರಿಂದ ಹೆಚ್ಚಿಗೆ ಹಣವನ್ನು ನಮ್ಮ ರಾಜ್ಯಕ್ಕೆ ಕೊಡಿಸಿಕೊಡಿ.

ಶ್ರೀ ಎಂ. ವಿ. ರಾಜಶೇಖರನ್.—ನಿಮ್ಮ ಹತ್ತಿರ ಇರುವ ಹಣವನ್ನು ಏನು ಮಾಡುತ್ತೀರಿ ? ನೀವು ಪ್ರತಿಯೊಂದಕ್ಕೂ ಅವರನ್ನು ಕೇಳಿಕೊಂಡು ಕೂತರೆ ಪಂಚಾಯಿತಿಗಳು ಅಭಿವೃದ್ಧಿಯಾಗುವುದು ಯಾವ ರೀತಿಯಲ್ಲಿ ? ಆದ್ದರಿಂದ ನಿಮ್ಮ ಹತ್ತಿರ ಇರುವುದನ್ನು ಮೊದಲು ಖರ್ಚು ಮಾಡಿ. ನಂತರ ಆಲ್ಲಿಂದಲೂ ಹಣವನ್ನು ತರಿಸೋಣ. ಮಾನ್ಯ ಅಧ್ಯಕ್ಷರು ನನಗೆ ಕಡಿಮೆ ಸಮಯವನ್ನು ಕೊಟ್ಟಿರುವುದರಿಂದ ಆದಷ್ಟು ಬೇಗನೆ ನನ್ನ ಭಾಷಣವನ್ನು ಮುಗಿಸುವವನಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ಕೇಂದ್ರದಲ್ಲಿ ಜನತಾ ಸರ್ಕಾರ ಅಸ್ತಿತ್ವದಲ್ಲಿದೆ. ಅಲ್ಲಿಂದ ಹೆಚ್ಚು ಹೆಚ್ಚು ಹಣವನ್ನು ಡಿವಿಸಿಬಲ್ ಪೂಲ್‌ಗೆ ಕೊಡಿಸಿಕೊಟ್ಟರೆ ಅದರಿಂದ ನಾವು ಹೆಚ್ಚು ಹೆಚ್ಚು ಕೆಲಸವನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ. ಇಲ್ಲಿ ಇರುವುದನ್ನು ಖರ್ಚು ಮಾಡಿ ಎಂಬುದಾಗಿ ತಾವು ಹೇಳುವುದಾದರೆ, ನಾವು ಸರ್ಕಾರವನ್ನು ನಡೆಸುತ್ತಿದ್ದೇವೆ. ನಮಗಿರತಕ್ಕಂಥ ಇಂಟರ್ನಲ್ ರಿಸೋರ್ಸಸ್ ಹಾಗೂ ಎಕ್ಸ್‌ಟರ್ನಲ್ ರಿಸೋರ್ಸನ್ನು ನೋಡಿಕೊಂಡು ಯಾರ್ಯಾರಿಗೆ ಏನೇನು ಅನುಕೂಲಗಳನ್ನು ಮಾಡಬೇಕೆಂದು ಯೋಚನೆ ಮಾಡಿದ್ದೇವೆಯೋ ಅದರಂತೆ ನಾವು ಮಾಡುತ್ತೇವೆ. ಇಲ್ಲಿ ಇರುವುದನ್ನು ಖರ್ಚು ಮಾಡಿ ಎಂಬುದಾಗಿ ಎಲ್ಲರೂ ಹೇಳುತ್ತಾರೆ. ತಾವು ಕೂಡ ಈ ಮನೆಯ ಸದಸ್ಯರಾಗಿ ಹೇಳುತ್ತಿದ್ದೀರಿ. ಕೇಂದ್ರದಲ್ಲಿ ಜನತಾ ಸರ್ಕಾರ ಇರುವುದರಿಂದ ಜಾಸ್ತಿ ಹಣವನ್ನು ಕೊಡಿಸಿಕೊಟ್ಟರೆ ಎಲ್ಲವನ್ನೂ ಅಭಿವೃದ್ಧಿ ಕಾರ್ಯಕ್ಕಾಗಿ ಖರ್ಚು ಮಾಡುತ್ತೇವೆ.

ಶ್ರೀ ಎಂ. ವಿ. ರಾಜಶೇಖರನ್.—ಮೊದಲು ನಿಮ್ಮ ಹತ್ತಿರ ಇರುವ ಅಂದರೆ ರೆವಿನ್ಯೂದಿಂದ ಬರುತ್ತಿರುವ ೬-೭ ಕೋಟಿ ರೂಪಾಯಿ ಹಣವನ್ನು ಖರ್ಚು ಮಾಡಿ. ನಂತರ ಬೇರೆಯವರನ್ನು ಕೇಳೋಣ ಎಲ್ಲದಕ್ಕೂ ನೋಡೋಣ ಎಂಬುದು ಯಾವ ನ್ಯಾಯ ? ಆದ್ದರಿಂದ ದಯವಾಡಿ ಯೋಚನೆ ಮಾಡಿ ಮೊದಲು ಸಂಪನ್ಮೂಲಗಳನ್ನು ಹಳ್ಳಿಗಳಿಗೆ ಹಂಚಿ.

ಶ್ರೀ ಬಿ. ಬಸವಲಿಂಗಪ್ಪ.—ಈ ರಾಜ್ಯ ಕೊಟ್ಟಿರುವುದನ್ನು ಕೊಡಿಸಿಕೊಡಿ.

ಶ್ರೀ ಎಂ. ವಿ. ರಾಜಶೇಖರನ್.—ಸುಮಾರು ೪೦ ಸಾವಿರ ಕೋಟಿ ರೂಪಾಯಿಗಳನ್ನು ಈ ಗ್ರಾಮಾಭಿವೃದ್ಧಿಗೆ ಖರ್ಚು ಮಾಡಬೇಕೆಂದು ಕೇಂದ್ರ ಸರ್ಕಾರ ಈಗಾಗಲೇ ತೀರ್ಮಾನ ಮಾಡಿದ್ದಾರೆ. ಆದ್ದರಿಂದ ಇದಕ್ಕೆ ಹಣ ಕೇಂದ್ರದಿಂದ ಬರುತ್ತದೆ. ಕೇಂದ್ರ ಸರ್ಕಾರ ಈ ಪಂಚಾಯಿತಿ ಅಭಿವೃದ್ಧಿಗಾಗಿ ಮಾಡಿರುವ ಕಾರ್ಯ ಯಾವುದೆಂದರೆ ಇಡೀ ಪಂಚಾಯಿತಿ ರಾಜ್ ಇನ್ಸ್‌ಟಿಟ್ಯೂಷನ್ಸ್ ಬಹಳ ಚೆನ್ನಾಗಿ ಕೆಲಸ ಮಾಡಬೇಕೆಂಬ ದೃಷ್ಟಿಯಿಂದ ಶ್ರೀಮಾನ್ ಅಶೋಕ ಮೆಹತಾ ರವರ ನೇತೃತ್ವದಲ್ಲಿ ಒಂದು ಕಮಿಟಿಯನ್ನು ನೇಮಕ ಮಾಡಿದ್ದಾರೆ. ಇನ್ನು ಒಂದು ತಿಂಗಳೊಳಗೆ ಈ ಕಮಿಟಿ ತನ್ನ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಕೊಡುವವರಿದ್ದಾರೆ. ನಂತರ ಅದರ ಮೇಲೆ ಕ್ರಮ ತೆಗೆದುಕೊಳ್ಳುವವರಿದ್ದಾರೆ. ಕಾದು ನೋಡೋಣ. ಮೊದಲು ನಿಮ್ಮಲ್ಲಿರತಕ್ಕಂಥ ಸಂಪನ್ಮೂಲಗಳನ್ನು ಸರಿಯಾದ ರೀತಿಯಲ್ಲಿ ಪಂಚಾಯಿತಿ ರಾಜ್ ಇನ್ಸ್‌ಟಿಟ್ಯೂಷನ್ಸ್ ಚೆನ್ನಾಗಿ ಕೆಲಸ ಮಾಡುವುದಕ್ಕೆ ಏನೇನು ಅನುಕೂಲತೆಗಳನ್ನು ಕೊಡಬೇಕೋ ಅದನ್ನು ಮೊದಲು ಕೊಡಿ. ಇಡೀ ರಾಜ್ಯದಲ್ಲಿ ರೆವಿನ್ಯೂದಿಂದ ಬರತಕ್ಕಂಥ ಪರಮಾನದಲ್ಲಿ ಶೇಕಡ ೫೦ ರಷ್ಟು ಪಂಚಾಯಿತಿಗಳ ಅಭಿವೃದ್ಧಿ ಕಾರ್ಯಕ್ಕಾಗಿ ಒದಗಿಸಿಕೊಡಬೇಕು. ಹಾಗೂ ಫಾರೆಸ್ಟ್ ರೆವಿನ್ಯೂ ಯಿಂದ ಬರತಕ್ಕ ವರಮಾನದಲ್ಲೂ ಕೂಡ ಶೇಕಡ ೫೦ ಭಾಗವನ್ನು ಪಂಚಾಯಿತಿರಾಜ್ ಅಭಿವೃದ್ಧಿಗೆ ಒದಗಿಸಿಕೊಡಬೇಕೆಂದು ಸರ್ಕಾರದವರನ್ನು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನೂ ಪಂಚಾಯಿತಿ ಚುನಾವಣೆಗಳು ಈಗಾಗಲೇ ಮುಗಿದಿವೆ. ಪಂಚಾಯಿತಿ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಚಿಯ್ಕೆ ಮಾಡುವ ವಿಚಾರದಲ್ಲೂ ಸಹಿತ, ವಿಧಾನ ಸಭೆ ಸದಸ್ಯರು ಹಾಗೂ ವಿಧಾನ ಪರಿಷತ್ತಿನ ಸದಸ್ಯರಿಗೆ ತಪ್ಪು ಮಾಡಿದವರಿಗೆ, ಕರಪ್ಟ್ ಪ್ರಾಕ್ಟೀಸ್ ಮಾಡಿದರೆ ಯಾವ ರೀತಿ ಡಿಸ್

ಕ್ವಾಲಿಫಿಕೇಷನ್ ಆಪ್ಲೈ ಆಗುತ್ತದೆ ಅದೇ ರೀತಿ ಇವರಿಗೂ ಅಪ್ಲೈಯಾಗುತ್ತದೆಂಬ ಬಗ್ಗೆಯೂ ತಿದ್ದುಪಡಿಯನ್ನು ತಂದಿದ್ದೀರಿ. ಆದ್ದರಿಂದ ನಾನು ಇದನ್ನು ಸ್ವಾಗತಿಸುತ್ತೇನೆ. ಅದು ಆಗಬೇಕಾದುದು ಬಹಳ ಮುಖ್ಯವಾದುದು. ನಮ್ಮ ರಾಜ್ಯದಲ್ಲಿ ಈಗಾಗಲೇ ೧೦–೧೨ ಜಿಲ್ಲೆಗಳಲ್ಲಿ ಪಂಚಾಯಿತಿ ಚುನಾವಣೆಗಳು ಮುಗಿದಿವೆ. ಪಂಚಾಯಿತಿ ಚುನಾವಣೆಗಳು ಮುಗಿದು ಒಂದೂವರೆ ತಿಂಗಳಾದರೂ ಕೂಡ ಇಪತ್ತಿಗೂ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಚುನಾವಣೆಯಾಗಿಲ್ಲ. ತಾಲ್ಲೂಕು ಬೋರ್ಡಿನ ಅಧ್ಯಕ್ಷರು ಹಾಗೂ ಪಂಚಾಯಿತಿ ಅಧ್ಯಕ್ಷರು ಈ ಸ್ಥಾನಗಳಿಗೆ ನೇರವಾಗಿ ಜನತೆಯಿಂದ ಚುನಾವಣೆಯಾಗತಕ್ಕಂಥ ವ್ಯವಸ್ಥೆಯನ್ನು ಇಲ್ಲಿ ಸೇರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅದನ್ನು ತಂದಿದ್ದೇ ಆದರೆ ನಾವುಗಳು ಬಹಳಷ್ಟು ಸತ್ವಪೂರ್ಣವಾಗಿ ಹಾಗೂ ಚೆನ್ನಾಗಿ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆಂದು ನಾನು ತಿಳಿದುಕೊಳ್ಳುತ್ತೇನೆ.

ಇನ್ನೊಂದು ವಿಚಾರ ಏನೆಂದರೆ, ಈ ಪಂಚಾಯತ್ ರಾಜ್ಯ ಸಂಸ್ಥೆಗಳು ಚೆನ್ನಾಗಿ ಕೆಲಸ ಮಾಡಬೇಕಾದರೆ, ಹಳ್ಳಿಯನ್ನು ಒಂದು ಯೂನಿಟ್ ಆಗಿ ತೆಗೆದುಕೊಳ್ಳಬೇಕು. ಅಲ್ಲಿರತಕ್ಕಂಥ ಜನರೆಲ್ಲರೂ ಸೇರಿ ಸಭೆ ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಇದಕ್ಕೆ ಗ್ರಾಮಸಭಾ ಎಂದು ಹೇಳುತ್ತಾರೆ. ಅನೇಕ ರಾಜ್ಯಗಳಲ್ಲಿ ಇಂತಹ ಗ್ರಾಮಸಭಾಗಳಿಗೆ ಸ್ಟಾಟ್ಯೂರಿಟಿ ರೆಕಗ್ನಿಷನ್ ಕೊಟ್ಟಿದ್ದಾರೆ. ಆದರೆ ದುರ್ದೈವದಿಂದ ನಮ್ಮ ರಾಜ್ಯದಲ್ಲಿ ಈ ವಿಚಾರವನ್ನು ಎಲ್ಲಿಯೂ ಎತ್ತಿಲ್ಲ ಮತ್ತು ಎಲ್ಲಿಯೂ ತೋರಿಸಿಲ್ಲ. ಈಗಲಾದರೂ ಮಾನ್ಯ ಮಂತ್ರಿಗಳು ಈ ಗ್ರಾಮಸಭಾವನ್ನು ಈ ತಿದ್ದುಪಡಿಯಲ್ಲಿ ಸೇರಿಸುವುದರ ಮೂಲಕ ಅವುಗಳಿಗೆ ಸ್ಟಾಟ್ಯೂರಿಟಿ ರೆಕಗ್ನಿಷನ್ ಕೊಟ್ಟರೆ ಒಳ್ಳೆಯದೆಂದು ನನಗನ್ನಿಸುತ್ತದೆ ಆದಕಾರಣ ಇದಕ್ಕೆ ಸೂಕ್ತ ತಿದ್ದುಪಡಿಯನ್ನು ತರಬೇಕೆಂದು ತಮ್ಮ ಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ. ಗ್ರಾಮ ಪಂಚಾಯಿತಿಗಳು ಸತ್ವಪೂರ್ಣವಾಗಿ ಕೆಲಸ ಮಾಡಬೇಕಾದರೆ ಅಲ್ಲಿರತಕ್ಕಂಥ ಎಲ್ಲ ಜನರೂ ಸರಿಯಾಗಿ ಅದರಲ್ಲಿ ಭಾಗವಹಿಸಬೇಕು. ಆ ರೀತಿಯಾದರೆ ಮಾತ್ರ ಅಲ್ಲಿನ ಜನರಿಗೆ ಅನುಕೂಲವಾಗುತ್ತದೆ. ಈ ರೀತಿ ಜನರು ಭಾಗವಹಿಸದಿದ್ದರೆ ಈ ಪಂಚಾಯಿತಿಗಳು ಕೆಲವರ ಸ್ವತ್ತಾಗಿಬಿಡುತ್ತದೆ. ಯಾರು ಅಧ್ಯಕ್ಷರಿರುತ್ತಾರೆ. ಯಾರು ಉಪಾಧ್ಯಕ್ಷರಿರುತ್ತಾರೆ ಅಥವಾ ವೆಸ್ಟೆಡ್ ಇಂಟರೆಸ್ಟ್ ಇರುತ್ತಾರೆ, ಅಂತಹವರ ಗ್ರೂಪಿಂಬಿಯಾಗುತ್ತವೆ. ಇದಕ್ಕೆ ಅವಕಾಶ ಕೊಡಬಾರದೆಂದು ತಮ್ಮ ಮೂಲಕ ಪ್ರಾರ್ಥಿಸುತ್ತೇನೆ.

೫-೦೦ ಪಿ.ಎಂ.

ಇನ್ನು ಪ್ರೀಪ್ರೈಮರಿ ಮತ್ತು ಪ್ರೈಮರಿ ಸ್ಕೂಲುಗಳನ್ನು ನಡೆಸುವ ಜವಾಬ್ದಾರಿ ಪಂಚಾಯಿತಿಗಳಿಗೆ ಇರತಕ್ಕದ್ದು ಎಂದು ಹೇಳಿದ್ದೀರಿ. ಇದನ್ನು ನಾನು ಒಪ್ಪುತ್ತೇನೆ. ಆದರೆ ಇದಕ್ಕೆ ಆಗತಕ್ಕಂಥ ಖರ್ಚಿನಲ್ಲಿ ೨೯ಕಡಾ ೮೫ರಷ್ಟು ಹಣವನ್ನು ಸರ್ಕಾರದಿಂದ ಕೊಡಬೇಕೆಂದು ಕೊಂಡಜ್ಜಿ ಬಸಪ್ಪ ಕಮಿಟಿಯವರು ಹೇಳಿದ್ದಾರೆ. ಈಗ ಈ ಪಂಚಾಯಿತಿಗಳಿಗೆ ಬರತಕ್ಕಂಥ ಆದಾಯವನ್ನು ಗಣನೆಗೆ ತೆಗೆದುಕೊಂಡರೆ, ಈ ಒಂದು ಕೆಲಸವನ್ನು ಅವರು ಮಾಡುವುದಕ್ಕೆ ಸಾಧ್ಯವಿದೆಯೋ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಇನ್ನು ಮುಂದೆಯಾದರೂ ಸಹ ಆದಷ್ಟೂ ಹೆಚ್ಚಿನ ಹಣವನ್ನು ಸರ್ಕಾರದವರು ಕೊಟ್ಟಿದ್ದೇ ಆದರೆ ಇಲ್ಲಿ ನೀವು ತಂದಿರತಕ್ಕಂಥ ತಿದ್ದುಪಡಿಗಳಲ್ಲಿ ಕೆಲವು ಭಾಗಗಳನ್ನಾದರೂ ಅವರು ಕಾರ್ಯರೂಪಕ್ಕೆ ತರುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ. ಇದರ ಜೊತೆಗೆ ಈ ಪಂಚಾಯತ್ ರಾಜ್ ಸಿಸ್ಟಮ್ ಚೆನ್ನಾಗಿ ಕೆಲಸ ಮಾಡಬೇಕಾದರೆ ನಾನಾ ಹಂತದಲ್ಲಿ ಈ ವ್ಯವಸ್ಥೆಯನ್ನು ಜಾರಿಗೆ ತರಬೇಕು. ಇವೊತ್ತು ದುರ್ದೈವದಿಂದ ನಮ್ಮ ರಾಜ್ಯದಲ್ಲಿ ಏನಾಗಿದೆ ಎಂದರೆ, ವಿಲೇಜ್ ಪಂಚಾಯತ್‌ಗಳು ಕೆಲಸ ಮಾಡುತ್ತಿವೆ, ತಾಲ್ಲೂಕ್ ಬೋರ್ಡುಗಳು ಕೆಲಸ ಮಾಡುತ್ತಿವೆ, ಅನಂತರ ಬರುವುದು ಈ ನಮ್ಮ ಅಸೆಂಬ್ಲಿ ಮಾತ್ರ. ಈ ಒಂದು ದೊಡ್ಡ ಗ್ಯಾಪ್ ಇರುವುದು ಸರಿಯೇ? ಬಲವಂತರಾಯ್ ರಿಪೋರ್ಟ್ ಪ್ರಕಾರ ಮತ್ತು ಅನಂತರ ಬಂದಂಥ ಸಲಹೆಗಳ ಪ್ರಕಾರ ಥ್ರೀ ಟಿಯರ್ ಸಿಸ್ಟಮ್ಮನ್ನು ಜಾರಿಗೆ ತರುವುದು ಒಳ್ಳೆಯದು. ಇದನ್ನು ಎಲ್ಲ ತಜ್ಞರೂ ಹೇಳಿದ್ದಾರೆ. ಮತ್ತು ಇದನ್ನು ಕೇಂದ್ರ ಸರ್ಕಾರ ಸಹ ಒಪ್ಪಿಕೊಂಡಿದೆ. ಜೊತೆಗೆ ಈ ಪದ್ಧತಿಯನ್ನು ಅನೇಕ ರಾಜ್ಯಗಳಲ್ಲಿ ಜಾರಿಗೆ ತಂದಿದ್ದಾರೆ. ನಮ್ಮ ಪಕ್ಕದ ರಾಜ್ಯವಾದ ಆಂಧ್ರುದಲ್ಲಿ ಜಾರಿಗೆ ತಂದಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ಜಾರಿಗೆ ತಂದಿಲ್ಲ. ವಿಲೇಜ್ ಪಂಚಾಯಿತಿಗಳು, ತಾಲ್ಲೂಕ್ ಬೋರ್ಡ್, ಮತ್ತು ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್, ಈ ರೀತಿ ಇರುವಂತಹ ವ್ಯವಸ್ಥೆಯನ್ನು ನಮ್ಮ ರಾಜ್ಯದಲ್ಲಿಯೂ ತೀಕ್ಷ್ಣವಾಗಿ ಜಾರಿಗೆ ತರುವುದು ಮುಖ್ಯವೆಂದು ಹೇಳುತ್ತೇನೆ. ಇವೊತ್ತಿನದಿವಸ ನಮ್ಮ ಎಲ್ಲ ಯೋಜನೆಗಳನ್ನು ದೆಹಲಿಯಲ್ಲಾಗಲೀ, ಬೆಂಗಳೂರಿನಲ್ಲಿಯಾಗಲೀ ಕುಳಿತು ಮಾಡಿ, ಅವುಗಳನ್ನು ಜಾರಿಗೆ ತರುತ್ತೇವೆಂದು

ಯಾರಾದರು ತಿಳಿದುಕೊಂಡಿದ್ದರೆ ಅದು ತಪ್ಪಾಗುತ್ತದೆ. ಕಳೆದ ೩೦ ವರ್ಷಗಳಿಂದ ನಮ್ಮ ದೇಶದಲ್ಲಿ ಆಗಿರುವುದೇ ಇದಕ್ಕೆ ಸಾಕ್ಷಿ. ಹಳ್ಳಿಗಳು ಅಭಿವೃದ್ಧಿಯಾಗಬೇಕಾದರೆ, ಸರಿಯಾಗಿ ಹಣ ವ್ಯಯವಾಗ ಬೇಕಾದರೆ, ಜನರಿಗೆ ಎಲ್ಲ ಅನುಕೂಲಗಳು ಸಿಗಬೇಕಾದರೆ, ಜನರೇ ಯೋಜನೆಗಳನ್ನು ತಯಾರು ಮಾಡು ವುದಕ್ಕೆ ಅವಕಾಶ ಕೊಡಬೇಕು. ಮತ್ತು ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಜನರಿಗೇ ಅವಕಾಶ ಮಾಡಿಕೊಡಬೇಕು. ಪ್ರತಿ ಸಲ ನಮ್ಮ ಸರ್ಕಾರದವರು ಎಕನಾಮಿಕ್ ಅಂಡ್ ಸೋಷಿಯಲ್ ಜಸ್ಟೀಸ್ ಬಗ್ಗೆ ಹೇಳುತ್ತಾರೆ ಆದರೆ ಯಾರು ಇದನ್ನು ಕೊಡುವುದು ? ಹಳ್ಳಿಯ ಜನರೇ ಇದನ್ನು ಕಾರ್ಯರೂಪದಲ್ಲಿ ತರಬೇಕಾಗುತ್ತದೆ. ಆದಕಾರಣ ಅವರಿಗೆ ಎಲ್ಲ ಜವಾಬ್ದಾರಿಗಳನ್ನು ವಹಿಸಬೇಕೆಂದು ಹೇಳುತ್ತೇನೆ. ಥ್ರೀ ಟಿಯರ್ ಸಿಸ್ಟಮನ್ನು ನಾವು ಒಪ್ಪಿಕೊಂಡಿರುವಾಗ ಅದನ್ನು ಶೀಘ್ರವಾಗಿ ಜಾರಿಗೆ ತರಬೇಕೆಂದು ಹೇಳುತ್ತೇನೆ. ಒಂದು ವಿಚಾರ ನಿಮ್ಮ ತಲೆಯಲ್ಲಿದೆ. ಏನೆಂದರೆ, ಪಟ್ಟಣಗಳಲ್ಲಿರುವವರೇ ಬುದ್ಧಿವಂತರು, ಹಳ್ಳಿಗಳಲ್ಲಿರುವವರು ಅವಿದ್ಯಾವಂತರು, ಅವರಿಗೆ ಸಾಕಷ್ಟು ಬುದ್ಧಿಯಿಲ್ಲ ಎಂಬುದು. ಈ ನಿಮ್ಮ ಅಭಿಪ್ರಾಯ ಸರಿಯಲ್ಲ. ಹಳ್ಳಿಯ ಜನರಿಗ ನೀವು ಯಾವ ಜವಾಬ್ದಾರಿಯನ್ನೇ ವಹಿಸಿದರೂ ಸಹ, ಅವರು ಅದನ್ನು ಸತ್ವಪೂರ್ಣವಾಗಿ ನಮಗಿಂತ ಚೆನ್ನಾಗಿ ಮಾಡುತ್ತಾರೆ. ದಕ್ಷತೆಯಿಂದ ಆಡಳಿತ ನಡೆಸುತ್ತಾರೆಂಬ ಕೆಚ್ಚಿನ ಮಾತನ್ನು ನಾನು ಹೇಳುತ್ತೇನೆ. ಈಗಾಗಲೇ ಅವರು ಅನೇಕ ಕೆಲಸಗಳನ್ನು ಮಾಡಿ ತೋರಿಸಿದ್ದಾರೆ. ಇದಕ್ಕೆ ನಾನು ಅನೇಕ ನಿದರ್ಶನಗಳನ್ನು ಕೊಡಬಲ್ಲೆ; ಆದರೆ ಕಾಲಾವಕಾಶ ವಿಲ್ಲಿ. ಒಟ್ಟಿನಲ್ಲಿ ಥ್ರೀ ಟಿಯರ್ ಸಿಸ್ಟಮನ್ನು ಶೀಘ್ರವಾಗಿ ಜಾರಿಗೆ ತಂದು, ಸಾಕಷ್ಟು ಹಣವನ್ನು ಅವರಿಗೆ ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥಿಸುತ್ತೇನೆ. ಆಗ ಅವರು ಸತ್ವಪೂರ್ಣವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈಗ ಆಂಧ್ರದಲ್ಲಿ ಡಿಸ್ಟ್ರಿಕ್ಟ್ ಡೆವಲಪ್ ಮೆಂಟ್ ಕೌನ್ಸಿಲ್‌ನವರಿಗೆ ಒಂದು ಕೋಟಿ ರೂ.ಗಳವರೆಗೆ ಆ ಜಿಲ್ಲೆಯ ಅಭಿವೃದ್ಧಿಗಾಗಿ ಖರ್ಚು ಮಾಡು ವುದಕ್ಕೆ ಆಲ್ಲಿಯ ಸರ್ಕಾರದವರು ಅಧಿಕಾರ ಕೊಟ್ಟಿದ್ದಾರೆ. ಆದರಂತೆ ಆ ರಾಜ್ಯದಲ್ಲಿ ತಾಲ್ಲೂಕ್ ಬೋರ್ಡಿನವರಿಗೆ ಹತ್ತು ಲಕ್ಷ ರೂ.ಗಳವರೆಗೆ ಯೋಜನೆಗಳನ್ನು ತಯಾರು ಮಾಡಿ ಅವುಗಳನ್ನು ಕಾರ್ಯ ರೂಪಕ್ಕೆ ತರಲು ಅಧಿಕಾರ ಕೊಟ್ಟಿದ್ದಾರೆ. ಇಂತಹ ಒಂದು ಪದ್ಧತಿಯನ್ನು ನಮ್ಮ ರಾಜ್ಯದಲ್ಲಿಯೂ ಜಾರಿಗೆ ತರಬಾರದೆಂದು ತಮ್ಮ ಮೂಲಕ ಕೇಳುವುದಕ್ಕೆ ಇಷ್ಟಪಡುತ್ತೇನೆ. ಜನರೇ ನಮ್ಮ ಪ್ರಭುಗಳೆಂದು ಹೇಳುವಾಗ ಅವರನ್ನು ನಾವು ಎಷ್ಟರಮಟ್ಟಿಗೆ ನೋಡುತ್ತಿದ್ದೇವೆಂದು ಈ ಬಿಲ್‌ನಿಂದಲೇ ತಿಳಿಯುತ್ತದೆ. ಜನರೇ ಪ್ರಭುಗಳೆಂದು ಹೇಳುವಾಗ ಅವರಲ್ಲಿ ಸರ್ಕಾರ ಪೂರ್ಣವಾದ ನಂಬಿಕೆಯನ್ನು ಇಡಬೇಕು. ಆಗ ಇದು ಸಾಫಲ್ಯವಾಗುತ್ತದೆಂದು ಹೇಳುತ್ತೇನೆ. ಇವೊತ್ತಿನದಿವಸ ಹಳ್ಳಿಗಳಲ್ಲಿ ಬಡ ಜನ ರಿದ್ದಾರೆ, ನಿರ್ಗತಿಕರಾಗಿದ್ದಾರೆ, ವೀಕರ್ ಸೆಕ್ಷನ್ ಇದ್ದಾರೆ, ಹರಿಜನ ಮತ್ತು ಗಿರಿಜನರಿದ್ದಾರೆ, ಇವರೆಗೆಲ್ಲಾ ಸರಿಯಾದ ಪ್ರಾತಿನಿಧ್ಯ ಕೊಡಲಾಗುತ್ತದೆಂದು ಇದರಲ್ಲಿ ಸೂಚಿಸಿದ್ದೀರಿ. ಈಗ ಸ್ಯಾಚ್ಯುರೇಟೆಡ್ ಬೋರ್ಡು ಗಳಲ್ಲಿ ಈ ಜನರಿಗೆ ಸೂಕ್ತ ಪ್ರಾತಿನಿಧ್ಯ ಕೊಡುತ್ತಾ ಬಂದಿದ್ದೀರಿ. ಆದರೆ ಪಂಚಾಯಿತಿಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಯಾವ ಯಾವ ಅನುಕೂಲಗಳನ್ನು ಮಾಡಿಕೊಟ್ಟಿದ್ದೀರಿ ಎಂಬುದನ್ನು ಯೋಚನೆ ಮಾಡಿದ್ದೇ ಆದರೆ, ನೀವು ಅಷ್ಟಾಗಿ ಕೊಟ್ಟಿಲ್ಲವೆಂದು ಗೊತ್ತಾಗುತ್ತದೆ. ಅವರು ಸತ್ವಪೂರ್ಣವಾಗಿ ಕೆಲಸ ಮಾಡಬೇಕಾದರೆ ಹಣ ಕೊಟ್ಟರೆ ಸಾಕಾಗುವುದಿಲ್ಲ, ರೂಲ್ಸ್, ರೆಗ್ಯುಲೇಷನ್ಸ್‌ನಲ್ಲಿ ಅಡಚಣೆಗಳಿದ್ದರೆ, ಆಡಳಿತದ ದೃಷ್ಟಿಕೋನದಲ್ಲಿ ಅಡಚಣೆಗಳಿದ್ದರೆ, ಅಂತಹ ಅಡಚಣೆಗಳನ್ನು ಹೋಗಲಾಡಿಸಲು ತಾವು ಪ್ರಯತ್ನ ಮಾಡಬೆಕಾಗುತ್ತದೆ. ಈಗ ಇರತಕ್ಕಂಥ ಅಡಚಣೆಗಳನ್ನು ದೂರವ ಮಾಡಿದ್ದೇ ಆದರೆ ಅವು ಸತ ಪೂರ್ಣವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ನಮ್ಮ ಸರ್ಕಾರದಲ್ಲಿರತಕ್ಕಂಥ ಅಧಿಕಾರವರ್ಗ ವಿದೆ, ಅವರೆಲ್ಲಾ ಬುದ್ಧಿವಂತರೆಂಬುದು ಸರಿ; ಆದರೆ ಅವರಿಗೆ ಬುದ್ಧಿ ಇದ್ದರೆ ಸಾಕಾಗುವುದಿಲ್ಲ. ಅವರಿಗೆ ಒಳ್ಳೆಯ ಹೃದಯವೂ ಇರಬೇಕು. ಇವೊತ್ತು ಹಳ್ಳಿಗಳಲ್ಲಿಯಾಗಲೀ, ಗ್ರಾಮಗಳಲ್ಲಿಯಾಗಲೀ, ಪಟ್ಟಣ ಗಳಲ್ಲಿಯಾಗಲೀ ಅಧಿಕಾರಿಗಳು ಒಳ್ಳೆಯ ಹೃದಯದಿಂದ ಕೆಲಸ ಮಾಡುತ್ತಿಲ್ಲವೆಂದು ಹೇಳಿದರೆ ತಪ್ಪಾಗ ಲಾರದು. We need a heart for understanding. That is what is needed to-day more than anything else, ನಮ್ಮಲ್ಲಿ ಸಾಕಷ್ಟು ಬುದ್ಧಿವಂತರಿದ್ದಾರೆ. ಆದರೆ ಅವರಲ್ಲಿ ಎಂತಹ ಬುದ್ಧಿ ಇದೆಯೆಂದರೆ, ಆಗುವ ಕೆಲಸಕ್ಕೆ ಎಷ್ಟರಮಟ್ಟಿಗೆ ಅಡಚಣೆ ಮಾಡಬಹುದು, ಎಷ್ಟರಮಟ್ಟಿಗೆ ಅದನ್ನು ನಿಲ್ಲಿಸಬಹುದು, ಅದಕ್ಕೆ ಯಾವ ಯಾವ ಕೊಕ್ಕೆಗಳನ್ನು ಹಾಕಬಹುದು ಎನ್ನ ತಕ್ಕದ್ದನ್ನು ಯೋಚನೆ ಮಾಡತಕ್ಕಂಥ ಬುದ್ಧಿ ಇದೆ. ಕೆಲಸವನ್ನು ಆದಷ್ಟು ಜಾಗ್ರತೆಯಾಗಿ ಮಾಡುವು ದಕ್ಕೆ, ಜನರಿಗೆ ಅನುಕೂಲವಾಗುವಂತೆ ಮಾಡುವುದಕ್ಕೆ, ಜನತೆಯೊಡನೆ ಎಷ್ಟರಮಟ್ಟಿಗೆ ಸಹಕಾರ ಮಾಡ ಬಹುದು ಅನ್ನತಕ್ಕಂಥ ಒಂದು ಒಳ್ಳೆಯ ಹೃದಯ ಇವರಲ್ಲಿ ಇಲ್ಲ. ಅದು ಅವರಲ್ಲಿ ಮೊದಲು ಬರಬೇಕು ಎಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎ. ಬಿ. ಬ್ಯಾಡಗಿ (ಸಡಾಲ್ಗ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸಭೆಯು ಮುಂದೆ ಇಂದು ತಿದ್ದುಪಡಿ ತಂದು ವಿವಿಧ ಹಂತಗಳಲ್ಲಿ ಮಾಡಬೇಕೆಂದಿರುವ ಸುಧಾರಣೆಗಳನ್ನಲ್ಲದೆ, ಜನಗಳ ಮನಸ್ಸನ್ನು ತಿಳಿದು ಇದುವರೆವಿಗೂ ಮಾಡಿದ ಎಲ್ಲ ಸುಧಾರಣೆಗಳನ್ನೂ ನಾನು ತುಂಬಾ ಹೃದಯದಿಂದ ಸ್ವಾಗತಿಸುತ್ತೇನೆ. ಸ್ವಾತಂತ್ರ್ಯೋತ್ತರ ಕಾಲದಲ್ಲಿ ನಮ್ಮ ರಾಜ್ಯದ ಹಳ್ಳಿಗಳಲ್ಲಿ ಆದ ಸುಧಾರಣೆಗಳು ಅಪೂರ್ವವೆಂದು ನಾನು ಹೇಳುತ್ತೇನೆ. ನಾನು ಐವತ್ತೇಳು ವರ್ಷಗಳ ಹಿಂದೆ ಹುಟ್ಟಿದವನು. ೧೯೩೦ ರಲ್ಲಿ ನಡೆದ ಸ್ವಾತಂತ್ರ್ಯ ಚಳವಳಿಯನ್ನು ನಾನು ನೋಡಿದ್ದೇನೆ. ೧೯೪೨ರ ಕ್ವಿಟ್ ಇಂಡಿಯಾ ಚಳವಳಿಯನ್ನು ಕಣ್ಣಾರೆ ಕಂಡಿದ್ದಲ್ಲದೆ, ಆ ಚಳವಳಿಯಲ್ಲಿ ಭಾಗವಹಿಸಿದ್ದೇನೆ. ಆ ಸಮಯಗಳಲ್ಲಿ ಹಳ್ಳಿಗಳಲ್ಲುಂಟಾದ ರೋಗರುಜಿನಗಳ ತೊಂದರೆಗಳನ್ನು ಅನುಭವಿಸಿದ್ದೇನೆ. ಮಲೇರಿಯಾ, ಪ್ಲೇಗು ಉಪದ್ರವಗಳಿಂದ ಜನರಿಗಾಗುತ್ತಿದ್ದ ತೊಂದರೆಗಳನ್ನು ನೋಡಿ ನನ್ನ ಮನಸ್ಸು ಅಲ್ಲೋಲಕಲ್ಲೋಲವಾಗಿದೆ. ಅಂತಹ ಸಂದರ್ಭಗಳಲ್ಲಿ ಕೆಲವರು ಊರು ಬಿಟ್ಟು ಓಡುವ ಸನ್ನಿವೇಶ ಒಂದು ಕಡೆ ಇದ್ದರೆ, ಮತ್ತೊಂದು ಕಡೆ ಊರಿಗೆ ಊರೇ ಖಾಲಿಯಾಗುವ ಪ್ರಸಂಗವನ್ನು ಕಂಡಿದ್ದೇನೆ. ಆದರೆ, ಸ್ವಾತಂತ್ರ್ಯಾನಂತರ ನಮ್ಮ ಮಂಡಲಿಗಳಲ್ಲಿ ಲೋಕಶಾಹಿ ಪಾಶವನ್ನು ಹಾಕಿಕೊಂಡು, ಹಳ್ಳಿಗಳನ್ನು ಸುಧಾರಣೆ ಮಾಡಿರುವುದನ್ನು ಕಂಡು ನಾನು ಬಹಳ ಸಂತೋಷ ಹೊಂದಿದ್ದೇನೆ, ಯಾವ ಹಳ್ಳಿಗಳು ಸಂಜೆ ಹೊತ್ತು ಕಾಡಿನಂತೆ ಇದ್ದವೋ ಆ ಹಳ್ಳಿಗಳು ಇವತ್ತು ದಾರಿದೀಪಗಳಿಂದ, ವಿವಿಧ ದಾರಿಗಳಿಂದ, ಕೆಲವು ಹಳ್ಳಿಗಳಲ್ಲಂತೂ ಟಾರ್ ರಸ್ತೆಗಳು, ಶಾಲಾ ಕಾಲೇಜುಗಳು, ಮಧ್ಯಮ ಶಾಲೆಗಳೆಲ್ಲ ಆಗಿ ಕಂಗೊಳಿಸುತ್ತಿರುವ ದೃಶ್ಯವನ್ನು ನೋಡಿದಾಗ, ಕೆಲವು ಮಾನ್ಯ ಸದಸ್ಯರು ಅವುಗಳ ಬಗ್ಗೆ ವಿಪರೀತ ದೃಷ್ಟಿಕೋನದಿಂದ ಮಾತನಾಡುವುದು ಅಷ್ಟು ಸರಿಯಲ್ಲವೆಂದು ನನಗನ್ನಿಸುತ್ತದೆ. ಇವತ್ತು ಆಗಿರುವ ಸುಧಾರಣೆ ಸಣ್ಣದೇನಲ್ಲ, ಸಾಮಾನ್ಯವಾದದ್ದಲ್ಲ. ಆದರೂ, ಈ ಸಮಯದಲ್ಲಿ ನಿರ್ಗತಿಕರ ದೃಷ್ಟಿಯಿಂದ ಮತ್ತು ಬಡಬಗ್ಗರ ದೃಷ್ಟಿಯಿಂದ ಕೆಲವು ಮಹತ್ವಪೂರ್ಣವಾದ ಸುಧಾರಣೆಗಳು ಆಗಬೇಕಾಗಿದೆ. ೧೯೭೯ನೇ ಇಸವಿಯಿಂದೀಚೆಗೆ ಗ್ರಾಮ ಪಂಚಾಯತಿಗಳಲ್ಲಿ ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಲಿಗಳಲ್ಲಿನ ವಿವಿಧ ಅಂಗಗಳಲ್ಲಿ ಸಾಕಷ್ಟು ಸುಧಾರಣೆಯಾಗಿದೆ. ನಮ್ಮಲ್ಲಿ ಹೃದಯವಿರುವ ಮತ್ತು ಒಳ್ಳೆಯ ಮನಸ್ಸಿನಿಂದ ಕೆಲಸ ಮಾಡುವ ಅಧಿಕಾರಿಗಳಿದ್ದಾರೆ. ಆದರೆ, ನಾವು ಅವರನ್ನು ಕೌತಕಚವಾಗಿ ನೋಡುವುದು ಸರಿಯಲ್ಲ. ಎಲ್ಲ ವಿಷಯಗಳಲ್ಲೂ ಕುಂದುಕೊರತೆಗಳಿರುವಂತೆ ಈ ವಿಷಯದಲ್ಲೂ ಇರಬಹುದು. ಆದರೆ, ಅದು ಬಹಳ ಸಣ್ಣ ಪ್ರಮಾಣದ್ದು. ಇಂದು ಹಳ್ಳಿಗಳಲ್ಲಿ ಜನರು ಸಾಕಷ್ಟು ಉತ್ಪನ್ನ ಪಟ್ಟಕ್ಕೆ ಬಂದು, ತಮ್ಮ ತಮ್ಮ ಹಳ್ಳಿಗಳನ್ನು ಯೋಗ್ಯ ರೀತಿಯಲ್ಲಿ ಸುಧಾರಣೆ ಮಾಡಿಕೊಳ್ಳುವುದರಲ್ಲಿ ನಿರತರಾಗಿದ್ದಾರೆ. ತಾಲ್ಲೂಕು ಅಭಿವೃದ್ಧಿ ಮಂಡಲಿಗಳಲ್ಲೂ ಕೂಡ ವಿವಿಧ ಅಂಗಗಳು ಉತ್ತಮವಾಗಿ ಕೆಲಸ ಮಾಡುತ್ತಿವೆ.

(Madam Deputy Speaker in the Chair)

ಇನ್ನು ಕರ್ನಾಟಕ ಗ್ರಾಮ ಪಂಚಾಯತಿ ಮತ್ತು ಸ್ಥಳೀಯ ಸಂಸ್ಥೆಗಳ ತಿದ್ದುಪಡಿ ಕುರಿತು ಮಾತನಾಡುವುದಾದರೆ, ಸೆಕ್ಷನ್ ೪೨ರ ಅಬ್ಲೀಗೇಟರಿ ಫಂಕ್ಷನ್‌ನಲ್ಲಿ ಹೇಳಿರುವಂತೆ ಗ್ರಾಮ ಪಂಚಾಯತಿ ಎಂದರೆ ಹಲವು ಸಣ್ಣ ಸಣ್ಣ ಹಳ್ಳಿಗಳು ಸೇರಿ ಒಂದಾಗಿರುವುದು. ನಮ್ಮ ಕಡೆಗಳಲ್ಲಿ ದೊಡ್ಡ ಊರುಗಳನ್ನು ಮೌಜು ಎಂತಲೂ, ಸಣ್ಣ ಊರುಗಳನ್ನು ಮಜರೆ ಎಂತಲೂ ಕರೆಯುತ್ತಾರೆ. ಈ ಪಂಚಾಯತಿಯ ಆಯವ್ಯಯವನ್ನು—ಅಂದರೆ ಸರ್ಕಾರದಿಂದ ಬಂದ ಹಣವಾಗಲೀ ಆಥವಾ ಪಂಚಾಯತಿಯವರು ವಸೂಲು ಮಾಡಿದ ಹಣವಾಗಲಿ—ದೊಡ್ಡ ಊರಾದ ಮೌಜುಗೆ ಖರ್ಚು ಮಾಡಿ ಮುಗಿಸಿಬಿಡುತ್ತಾರೆ ಮತ್ತು ಮಜರೆಗಳು ಹಾಗೆ ಉಳಿಯುತ್ತವೆ. ಈ ಮಜರೆಗಳು ಬಹಳ ಹಿಂದಿನಿಂದಲೂ ಎಲ್ಲ ಸುಧಾರಣೆಯಿಂದಲೂ ವಂಚಿತವಾಗಿದೆ. ಆದುದರಿಂದ, ಇಂತಹ ಮಜರೆಗಳ ಸುಧಾರಣೆಯ ದೃಷ್ಟಿಯಿಂದ, ಆಯಾ ಮಜರೆ ಅಥವಾ ಮೌಜಿನಿಂದ ಬರುವ ಆದಾಯವನ್ನು ಅಲ್ಲಿಗೆ ಖರ್ಚು ಮಾಡಬೇಕೆಂದಾಗಲೀ ಅಥವಾ ಮಜರೆ ಅಥವಾ ಮೌಜಿನ ಜನಸಂಖ್ಯೆಗನುಗುಣವಾಗಿ ಖರ್ಚು ಮಾಡಬೇಕೆಂದಾಗಲೀ ಶಾಸನದಲ್ಲಿ ತಿದ್ದುಪಡಿ ಮಾಡಿದರೆ, ಮೌಜಿನಂತೆ ಮಜರೆಗಳು ಸುಧಾರಣೆ ಹೊಂದಲು ಅನುಕೂಲತಾಗುತ್ತದೆಂದು ಹೇಳಿ; ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ನಾರಾಯಣಪ್ಪ (ದೇವನಹಳ್ಳಿ). – ಮಾನ್ಯ ಅಧ್ಯಕ್ಷರೇ, ಕಳೆದ ಮೂವತ್ತು ವರ್ಷಗಳಿಂದ ಗ್ರಾಮ ಮಟ್ಟದಲ್ಲಿ ಮತ್ತು ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಾಗಿರುವ ಕೆಲಸವನ್ನು ನಾನು ಸ್ವಾಗತ ಮಾಡುತ್ತೇನೆ. ಆದರೂ, ಇನ್ನೂ ಹೆಚ್ಚಿನ ಸುಧಾರಣೆ ಈ ದಿಸೆಯಲ್ಲಾಗಬೇಕಾಗಿರುವುದರಿಂದ,

ಕರ್ನಾಟಕ ಗ್ರಾಮ ಪಂಚಾಯತಿ ಮತ್ತು ಸ್ಥಳೀಯ ಸಂಸ್ಥೆಗಳ ಮಸೂದೆಯಲ್ಲಿ ಕೆಲವು ತಿದ್ದುಪಡಿಗಳಾಗ ಬೇಕಾಗಿದೆ. ಅವುಗಳನ್ನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ. ಪಂಚಾಯತಿ ಚುನಾವಣೆಗಳಲ್ಲಿ ಹರಿಜನ ಅಭ್ಯರ್ಥಿಗಳಿಗೆ ಎಷ್ಟು ಮೀಸಲು ಸ್ಥಾನವಿರಬೇಕೆಂಬುದನ್ನು ನಿಗದಿ ಮಾಡಲಾಗಿದೆ. ಹಾಗೆಯೇ ತಾಲ್ಲೂಕು ಮತ್ತು ವಿಧಾನಸಭಾ ಚುನಾವಣೆಗಳಲ್ಲೂ ಸಹ ಹರಿಜನ ಅಭ್ಯರ್ಥಿಗಳಿಗೆ ಮೀಸಲು ಸ್ಥಾನವನ್ನು ನಿಗದಿ ಮಾಡಲಾಗಿದೆ. ಅದನ್ನನುಸರಿಸಿ, ಚುನಾವಣೆಗಳೂ ಸಹ ನಡೆದಿವೆ. ಅದೇ ರೀತಿ, ಗ್ರಾಮಪಂಚಾಯತಿ ಅಧ್ಯಕ್ಷರ ಚುನಾವಣೆಯಲ್ಲೂ ಸಹ ಹಿಂದುಳಿದ ಪಂಗಡದವರಿಗೆ ಇಂತಿಷ್ಟು ಅವಕಾಶಗಳನ್ನು ಮೀಸಲಿಡಬೇಕೆಂದು ನಾನು ಹೇಳಬಯಸುತ್ತೇನೆ. ಅಲ್ಲದೆ, ಸ್ಥಳೀಯ ಸಂಸ್ಥೆಗಳು ಮತ್ತು ಗ್ರಾಮ ಪಂಚಾಯತಿಗಳು ತಮ್ಮ ಆದಾಯದಲ್ಲಿ ಶೇಕಡ ಹದಿನೆಂಟಿರಪ್ಪನ್ನು ಹರಿಜನ-ಗಿರಿಜನರ ಅಭಿವೃದ್ಧಿಗಾಗಿ ಖರ್ಚು ಮಾಡಬೇಕೆಂದಿದ್ದರೂ, ಯಾವ ಪಂಚಾಯತಿಯವರಾಗಲಿ ಅಥವಾ ಸ್ಥಳೀಯ ಸಂಸ್ಥೆಗಳವರಾಗಲಿ ಖರ್ಚು ಮಾಡಿಲ್ಲ. ಆದುದರಿಂದ ಇನ್ನು ಮೇಲೆ ಅವುಗಳು ತಮ್ಮ ಆದಾಯದಲ್ಲಿ ಶೇಕಡ ಮೂವತ್ತಾರು ಭಾಗವನ್ನು ಹಿಂದುಳಿದ ಪಂಗಡಗಳ ಅಭಿವೃದ್ಧಿಗಾಗಿ ಖರ್ಚು ಮಾಡಲು ಕಡ್ಡಾಯ ಮಾಡಬೇಕು ಅಥವಾ ಶಾಸನವನ್ನೇ ಮಾಡಿ ಎಂದು ಹೇಳಬಯಸುತ್ತೇನೆ. ಮಾನ್ಯ ಬ್ಯಾಡಗಿಯವರು ಹೇಳಿದ ಹಾಗೆ, ಪಂಚಾಯತಿಯವರು ದೀಪ ಮತ್ತಿತರ ಸೌಕರ್ಯಗಳನ್ನು ಹೆಡ್‌ಕ್ವಾರ್ಟರ್ಸ್‌ಗಳಿಗೆ ಮಾತ್ರ ಒದಗಿಸುವರೆ ವಿನಹ ಸಣ್ಣ ಸಣ್ಣ ಗ್ರಾಮಗಳಿಗೆ ಒದಗಿಸುತ್ತಿಲ್ಲ, ಆ ಗ್ರಾಮಗಳಿಗೆ ಹೆಚ್ಚಿನ ಹಣವನ್ನೂ ಖರ್ಚು ಮಾಡುತ್ತಿಲ್ಲ. ಆದುದರಿಂದ, ಎಲ್ಲಾ ಗ್ರಾಮಗಳಿಗೂ ಸಮಭಾಗವಾಗಿ ಹಣ ಖರ್ಚು ಮಾಡಬೇಕು ಮತ್ತು ಸೌಕರ್ಯಗಳನ್ನು ಒದಗಿಸಬೇಕೆಂದು ಸರ್ಕಾರದವರು ಕಾನೂನು ಮಾಡಬೇಕು. ಮಾನ್ಯ ಮಂತ್ರಿಗಳು ಊರಿಗೊಂದು ಬಾವಿಯನ್ನು ಮಾತ್ರ ಒದಗಿಸಲಾಗುವುದೆಂದು ಹೇಳಿದ್ದರು. ಆದರೆ, ಕೆಲವು ಕಡೆಗಳಲ್ಲಿ ಒಂದು ಬಾವಿಗಿಂತಲೂ ಜಾಸ್ತಿ ಇದ್ದರೆ, ಇನ್ನು ಕೆಲವು ಕಡೆಗಳಲ್ಲಿ ಒಂದು ಬಾವಿಯೂ ಇರುವುದಿಲ್ಲ. ಅಲ್ಲದೆ, ಒಂದು ಊರಿಗೆ ಒಂದೇ ಬಾವಿ ಎಂದು ನಿಗದಿ ಮಾಡುವುದರ ಬದಲು ಆ ಊರಿನ ಜನಸಂಖ್ಯೆಗನುಗುಣವಾಗಿ ಮತ್ತು ಆ ಊರಿನಲ್ಲಿ ಬಳಸುವ ನೀರಿಗನುಗುಣವಾಗಿ ಬಾವಿಯನ್ನು ಒದಗಿಸಬೇಕು. ಪಟ್ಟಣಗಳಲ್ಲಾದರೆ ಒಂದೊಂದು ಬೀದಿಗೆ ಒಂದೊಂದು ನಲ್ಲಿ ಇರುತ್ತದೆ. ಆದರೆ, ಹಳ್ಳಿಗಳಿಗೆ ಮಾತ್ರ ಒಂದೇ ಬಾವಿ ಒದಗಿಸಲಾಗುವುದೆಂದು ಮಾಡುವುದು ಸರಿಯಲ್ಲ; ಅದನ್ನು ಬದಲಾವಣೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಗ್ರಾಮ ಪಂಚಾಯತಿಗಳಲ್ಲಿ ಜಮೀನುಗಳನ್ನು ವಶಪಡಿಸಿಕೊಂಡು, ಅವುಗಳನ್ನು ಹಿಂದುಳಿದ ಪಂಗಡದವರಿಗೆ ಮನೆ ಕಟ್ಟಿಕೊಳ್ಳಲು ಕೊಡಲಾಗುತ್ತಿದೆ. ಇದರಲ್ಲಿ ಕೆಲವು ನ್ಯೂನತೆಗಳಿವೆ. ಸಾಮಾನ್ಯವಾಗಿ ಗ್ರಾಮಗಳಲ್ಲಿ, ಎರಡು ಪಾರ್ಟಿಗಳಾಗಿ ಒಂದೊಂದು ಕಡೆ ಅರ್ಧರ್ಧ ಜನ ಇರುತ್ತಾರೆ. ಅಂತಹ ಸಂದರ್ಭಗಳಲ್ಲಿ ಜಮೀನು ಸ್ವಾಧೀನಪಡಿಸಿಕೊಳ್ಳುವ ಪ್ರಶ್ನೆ ಬಂದಾಗ, ಸುಲಭವಾಗಿ ಬಗೆ ಹರಿಯುತ್ತದೆ. ಏಕೆಂದರೆ, ಗ್ರಾಮದ ಪಾರ್ಟಿಗಳಲ್ಲಿ ಹಿಂದುಳಿದ ಪಂಗಡದವರೂ ಸಹ ಒಂದು ಕಡೆ ಇರುತ್ತಾರೆ. ಆದರೆ, ಹಿಂದುಳಿದ ಪಂಗಡದವರೇ ಒಂದು ಪಾರ್ಟಿಯಾಗಿ, ಗ್ರಾಮದ ಇತರರೆಲ್ಲರೂ ಒಂದು ಪಾರ್ಟಿಗಳಾದರೆ, ಅಂತಹ ಸಂದರ್ಭಗಳಲ್ಲಿ ಪಂಚಾಯತಿಯವರು ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ಸ್ವಲ್ಪ ಕಷ್ಟವಿದೆ ಹೀಗಾಗಿ ಹಿಂದುಳಿದ ಪಂಗಡದವರಿಗೆ ಕಾನೂನಿನ ಬಲವಿದ್ದರೂ, ಜಮೀನು ಸ್ವಾಧೀನವಾಗದೆ ಮನೆಗಳಿಗೆ ಜಾಗವಿಲ್ಲದೆ ಕಳೆದ ಇಪ್ಪತ್ತು ವರ್ಷಗಳಿಂದಲೂ ಹಾಗೆ ಇರುವ ಪರಿಸ್ಥಿತಿ ಬಂದಿದೆ. ಇಂತಹ ಒಂದು ಪರಿಸ್ಥಿತಿ ನಮ್ಮ ದೇವನಹಳ್ಳಿ ತಾಲ್ಲೂಕಿನ ಕನ್ನಮಂಗಲ ಗ್ರಾಮದಲ್ಲಿದೆ. ಸ್ವಾಮಿ, ಪಾಠಶಾಲೆಗಳ ಕಟ್ಟಡಕ್ಕೆ ಸಾರ್ವಜನಿಕರು ಕೊಡಬೇಕು, ಒಂದು ಸಾವಿರ ರೂಪಾಯಿ ಪಂಚಾಯತಿಯವರು ಕೊಡಬೇಕು, ಸರ್ಕಾರೀ ಹಣ ಕೊಡಬೇಕು ಎಂದು ನಾಲ್ಕೂವರೆ ಸಾವಿರ ರೂಪಾಯಿ ನಿಗದಿ ಮಾಡಿದೆ ಅಷ್ಟಕ್ಕೆ ಆಗುವುದಿಲ್ಲ. ಪಂಚಾಯತಿಯಿಂದ ಒಂದು ಸಾವಿರ ರೂಪಾಯಿ ಕೊಡಬೇಕು ಎಂದು ಏನು ನಿಗದಿ ಮಾಡಿದೆ ಅದನ್ನು ಈಗ ತೆಗೆದಿದ್ದೀರಿ. ಒಂದು ಸಾವಿರ ರೂಪಾಯಿ ಪಂಚಾಯತಿಯವರು ಕೊಡಬೇಕು ಎನ್ನುವ ನಿಯಮವನ್ನು ಸೇರಿಸಬೇಕು ಎಂದು ಕೇಳಿಕೊಳ್ಳುತ್ತೇನೆ ಇನ್ನು ಮನೆ ಲೈಸನ್ಸ್, ಮಿಲ್ಲುಗಳ ಲೈಸನ್ಸ್ ಬಗ್ಗೆ ಪಂಚಾಯತಿ ಛೇರ್‌ಮನ್‌ಗೆ ಅರ್ಜಿ ಕೊಟ್ಟಾಗ ಅವರು ಒಂದು ತಿಂಗಳೊಳಗಾಗಿ ಕೊಟ್ಟರೆ ಸಂತೋಷ. ಅವರು ಒಂದು ತಿಂಗಳೊಳಗಾಗಿ ಕೊಡದೇ ಹೋದರೆ ಆಟೋಮ್ಯಾಟಿಕ್ ಆಗಿ ಲೈಸನ್ಸ್ ಸಿಕ್ಕಿದಹಾಗೆ ಏನನ್ನಪ ಕಾನೂನು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಇನ್ನು ಪಂಚಾಯತಿ ಚುನಾವಣೆ ಆದ ಮೇಲೆ ಮೀಟಿಂಗ್ ಕರೆದಮೇಲೆ ಆ ಮೀಟಿಂಗ್‌ನ ಬಗ್ಗೆ ಸದಸ್ಯರ ಮನೆಗೆ ಕಳುಹಿಸಿ ಸಹಿ ಹಾಕಿಸಿಕೊಂಡು ಬರುವ ಪದ್ಧತಿ ಇದೆ. ಆದರ ಬಗ್ಗೆ ಅಧಿಕಾರಿಗಳು ನಿಗಾ ಮಾಡಬೇಕು ಎಂದು ಹೇಳುತ್ತೇನೆ. ಇನ್ನು ಒಂದೊಂದು ಪಂಚಾಯತಿಗಳಲ್ಲಿ ೨೦-೩೦ ಸಾವಿರ ರೂಪಾಯಿ ಹಣ ಖರ್ಚು ಮಾಡದೇ ಹಾಗೆ ಉಳಿದಿರುತ್ತದೆ. ಅಂತಹ ಪಂಚಾಯತಿಗಳಲ್ಲಿ ಅಧಿಕಾರಿಗಳು ಇದ್ದು ವರ್ಷಕ್ಕೆ ಒಂದು ಸಾರಿ ಆಡಿಟ್ ಆಗಿದ್ದರೂ

ಈ ಹಣ ಏತಕ್ಕೆ ಖರ್ಚು ಮಾಡಲಿಲ್ಲ ಎಂದು ಕ್ರಮ ತೆಗೆದುಕೊಂಡಿಲ್ಲ. ಇಂತಾದ್ದರ ಬಗ್ಗೆ ಮಾನ್ಯ ಮಂತ್ರಿಗಳು ನಿಗಾ ಇಡಬೇಕು ಎಂದು ಪ್ರಾರ್ಥಿಸುತ್ತೇನೆ. ಇನ್ನು ಪಂಚಾಯತಿ ಮೀಟಿಂಗ್‌ನಲ್ಲಿ ಹಿಂದುಳಿದ ಪಂಗಡದವರಿಗೆ ಏನೇನು ಸೌಲಭ್ಯ ಕೊಡಬೇಕು ಎಂದು ನಿಯಮ ಇದೆ ಆಪ್ಶನ್ನು ತೆಗೆದು ಆದು ಖರ್ಚು ಮಾಡಿದ ಮೇಲೆ ಬೇರೆಯವರಿಗೆ ಸೌಲಭ್ಯ ಕೊಡಲಿಕ್ಕೆ ಕಾನೂನು ಮಾಡಬೇಕು ಎಂದು ಹೇಳುತ್ತೇನೆ. ಇನ್ನು ಹೈಸ್ಕೂಲು ತೆರೆಯಬೇಕಾದರೆ ೫೦ ಸಾವಿರ ರೂಪಾಯಿ ಕೊಡಬೇಕು ಎಂದು ಕೇಳುತ್ತಾರೆ. ಇವೊತ್ತು ೫೦ ಸಾವಿರ ರೂಪಾಯಿ ಹಣ ಒಂದು ಹಳ್ಳಿಯಲ್ಲಿ ಶೇಖರಿಸಿಕೊಡಲಿಕ್ಕೆ ಸಾಧ್ಯವಿಲ್ಲ. ಈ ಕಾರಣದಿಂದ ಒಂದು ಪಂಚಾಯತಿಯಲ್ಲಿ ಕಲ್ಲಿನ ಬಂಡೆ ಇರುತ್ತದೆ, ತೋಪುಗಳು ಇರುತ್ತವೆ, ಹುಲ್ಲು ತೋಪು ಇರುತ್ತದೆ, ಇದರ ಆದಾಯವನ್ನೆಲ್ಲಾ ಕೊಟ್ಟರೆ ೩೦-೪೦ ಸಾವಿರ ರೂಪಾಯಿ ಪಂಚಾಯತಿಗೆ ಆದಾಯ ಬರುತ್ತದೆ. ಈ ರೀತಿ ಪಂಚಾಯತಿಗಳವರಿಗೆ ಒಂದು ಕೋಟಾ ಕೊಟ್ಟರೆ ಆಗ ಅವರು ಒಂದು ಹೈಸ್ಕೂಲು ಮಾಡಬಹುದು, ಒಂದು ಆಸ್ಪತ್ರೆ ಕಟ್ಟಿಸಿಕೊಳ್ಳಬಹುದು. ಆದ್ದರಿಂದ ಸರ್ಕಾರದವರು ಡಳ್ಳಿಗಳ ಕಡೆಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಿ ಅನುಕೂಲ ಮಾಡಿಕೊಡಬೇಕೆಂದು ಹೇಳಿ ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಸಭಾಧ್ಯಕ್ಷಣಿಯವರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಡಿ.ಟಿ. ರಾಮು (ಚನ್ನಪಟ್ಟಣ).—ಸನ್ಮಾನ್ಯ ಸಭಾಧ್ಯಕ್ಷಣಿ ಮಾತೆಯವರೆ, ಮಾನ್ಯ ಪಂಚಾಯಿತಿ ರಾಜ್ ಸಚಿವರು ಏನು ಈ ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಇದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಕೆಲವು ಸಲಹೆಗಳನ್ನು ಮಾಡಲಿಕ್ಕೆ ಇಷ್ಟಪಡುತ್ತೇನೆ. ಪ್ರಪ್ರಥಮವಾಗಿ ನಾವು ತಂದಿರತಕ್ಕ ತಿದ್ದುಪಡಿ ಎಂದರೆ ಒಂದು ತಾಲ್ಲೂಕು ಬೋರ್ಡ್ ಅಧ್ಯಕ್ಷರ ಚುನಾವಣೆ ನಡೆಯುವಾಗ ಅಲ್ಲಿಯ ವಿಧಾನಸಭಾ ಸದಸ್ಯರು ಜೊತಗೆ ಅದೇ ಪ್ರದೇಶದಲ್ಲಿ ವಾಸವಾಗಿ ಇರತಕ್ಕ ವಿಧಾನ ಪರಿಷತ್ತಿನ ಸದಸ್ಯರು ಆ ಚುನಾವಣೆಯಲ್ಲಿ ಭಾಗವಹಿಸಬೇಕು ಎಂದು ಏನು ಒಂದು ಮಸೂದೆ ತಂದಿದ್ದಾರೆ ಅದು ನಿಜವಾಗಿಯೂ ಸಹ ಸ್ವಾಗತಾರ್ಹವಾದ ಮಸೂದೆ. ಶಾಸನ ಸಭಾ ಸದಸ್ಯರ ಕ್ಷೇತ್ರದ ಒಂದು ಭಾಗ ತಾಲ್ಲೂಕು ಬೋರ್ಡ್‌ಗೆ ಸೇರಿದರು ಅವರು ಕೂಡ ಓಟು ಮಾಡಬಹುದು. ಜೊತೆಗೆ ಆ ಕ್ಷೇತ್ರದಲ್ಲಿ ವಿಧಾನ ಪರಿಷತ್ತಿನ ಸದಸ್ಯರು ವಾಸವಾಗಿದ್ದರೆ ಅಧ್ಯಕ್ಷ ಚುನಾವಣೆಯಲ್ಲಿ ಭಾಗವಹಿಸಬಹುದು ಎಂದು ಏನು ತಂದಿದ್ದಾರೆ ಅದು ನಿಜವಾಗಿಯೂ ಸಹ ಸ್ವಾಗತಾರ್ಹವಾದುದು. ಇನ್ನು ಅಮೆಂಡ್‌ಮೆಂಟ್ ಆಫ್ ಸೆಕ್ಷನ್ ೫೧ರಲ್ಲಿ ಒಂದು ಸಾಮಾಜಿಕ ನ್ಯಾಯ ಸಮಿತಿ ಎನ್ನತಕ್ಕದ್ದನ್ನು ಪ್ರಪ್ರಥಮ ಬಾರಿಗೆ ತರುತ್ತಿದ್ದಾರೆ. ಅಲ್ಲಿ ಮಹಿಳಾ ಸದಸ್ಯರು, ನಿಮ್ಮ ವರ್ಗಕ್ಕೆ ಸೇರಿದ ಸದಸ್ಯರು ಜೊತೆಗೆ ಆ ತಾಲ್ಲೂಕು ಬೋಡ್ ನಾಮಕರಣ ಮಾಡತಕ್ಕ ಮೂರು ಸದಸ್ಯರು ಆ ಸಮಿತಿಯಲ್ಲಿ ಇರಬೇಕು. ಈ ಮಧ್ಯೆ ಸಾಮಾಜಿಕ ನ್ಯಾಯ ಸಮಿತಿ ಆದಾಗ ಆ ಊರಿನಲ್ಲಿ ನಡೆಯತಕ್ಕ ಅಭಿವೃದ್ಧಿ ಕಾರ್ಯಪರಿಶೀಲಿಸತಕ್ಕ ಹಕ್ಕು ಉಂಟು ಎಂದು ಇಲ್ಲಿ ತೋರಿಸಿರತಕ್ಕದ್ದು ನಿಜವಾಗಿಯೂ ಸ್ವಾಗತಾರ್ಹವಾದ ತಿದ್ದುಪಡಿ ಎಂದು ನನ್ನ ವೈಯಕ್ತಿಕ ಉದ್ದೇಶ. ಈಗ ಸಾಮಾಜಿಕ ನ್ಯಾಯ ಸಮಿತಿಗೆ ಒಂದು ಅಧಿಕಾರ. The Social Justice Committee could review the progress of these schemes from time to time. They could also review a number of beneficiary schemes meant for the welfare of the weaker sections under SFDA DPAP, Intensive and Integrated RuralDevelopment Applied Nutrition Programme, etc. ಅಂದರೆ ಸಣ್ಣ ರೈತರಿಗೆ ಅವಕಾಶ ಕಲ್ಪಿಸಿಕೊಡತಕ್ಕ ಒಂದು ಸಂಸ್ಥೆ ದೇಶದಲ್ಲಿ ನಡೆಯತಕ್ಕ ಅಭಿವೃದ್ಧಿ ಕಾರ್ಯಗಳ ಜೊತೆಗೆ ಪೌಷ್ಟಿಕ ಆಹಾರದ ಯೋಜನೆ ಬರತಕ್ಕ ಒಂದು ವಿಷಯದ ಜೊತೆಗೆ ವ್ಯವಸಾಯದ ಅಭಿವೃದ್ಧಿ ಪ್ರಗತಿಪರ ದಿಕ್ಕಿನಲ್ಲಿ ನಡೆಯತಕ್ಕದಾರ ಬಗ್ಗೆ ವಿಮರ್ಶೆ ಮಾಡತಕ್ಕ ಅಧಿಕಾರ ಕೂಡತಕ್ಕೆದ್ದು ನಿಜವಾಗಿಯೂ ಸ್ವಾಗತಾರ್ಹವಾದುದು. ಸನ್ಮಾನ್ಯ ವಿಶ್ರಾರಾದ ರಾಜಶೇಖರನ್ ಅವರು ಸನ್ಮಾನ್ಯ ಸಚಿವರನ್ನು ಸಾಮಾಜಿಕ ನ್ಯಾಯ ಎಂದರೆ ಏನು ಎಂದು ಕೇಳುತ್ತಿದ್ದರು. ಸಾಮಾಜಿಕ ನ್ಯಾಯ ಎಂದರೆ, ಸಮಾಜದಲ್ಲಿ ಎಲ್ಲ ಜನರ ಕಲ್ಯಾಣವಾಗಬೇಕು ಪ್ರತಿಯೊಬ್ಬರಿಗೂ ಕುಡಿಯಲ್ಲಿಕ್ಕೆ ನೀರು ಸಿಕ್ಕಬೇಕು, ಪ್ರತಿಯೊಬ್ಬರಿಗೂ ವಾಸ ಮಾಡಲಿಕ್ಕೆ ಮನೆಗಳು ಸಿಕ್ಕಬೇಕು. ಪ್ರತಿಯೊಬ್ಬರಿಗೂ ಮೈ ಮುಚ್ಚಲಿಕ್ಕೆ ಬಟ್ಟೆ ಸಿಕ್ಕಬೇಕು. ಎಲ್ಲರ ದೃಷ್ಟಿಯಲ್ಲೂ ಎಲ್ಲರೂ ಒಂದೇ ಎನ್ನತಕ್ಕಂತಾದ್ದು ಉಂಟಾಗಬೇಕು ಆಗ ಸಾಮಾಜಿಕ ನ್ಯಾಯ ತಂದಂತಾಗುತ್ತದೆ ಎಂದು ನನ್ನ ಉದ್ದೇಶ. ಈ ಉದ್ದೇಶ ಅನುಸರಿಸಬೇಕಾದರೆ ಈ ಸಾಮಾಜಿಕ ನ್ಯಾಯ ಸಂಸ್ಥೆ ಎಂದು ಏನು ತಂದಿದ್ದಾರೆ ಅದಕ್ಕೆ ಇನ್ನೂ ಹೆಚ್ಚಿನ

ಅಧಿಕಾರವನ್ನು ಕೊಡಬೇಕು ಎಂದು ನನ್ನ ಖಚಿತವಾದ ಅಭಿಪ್ರಾಯ. ಇನ್ನು ಅಮೆಂಡ್‌ಮೆಂಟ್ ಆಫ್ ಸೆಷನ್ ೧೬ಕ್ಕಿರಲ್ಲಿ ತಾಲ್ಲೂಕು ಬೋರ್ಡ್ ಎನು ಇದೆ ಅದು ೧೨ ಪೈಸೆಗೆ ಬದಲು ೫೦ಪೈಸೆ ಲೆವಿ ಹಾಕಬಹುದು ಎಂದು ತಿದ್ದುಪಡಿ ತಂದಿದ್ದಾರೆ. ಅದರ ಬಗ್ಗೆ ಇಲ್ಲಿ ಒಂದು ಕ್ಲಾಸ್ ಈ ರೀತಿ ಇದೆ.

35. Amendment of section 163.– In section 163 of the principal Act,–

(1) in, sub-section (1) for the words "twelve naye paise" the words "fifty paise" shall be substituted;

(2) for sub-section (2) the following sub-sections shall be substituted, namely:

"(2) The Government shall also levy a local cess surcharge at a rate of fifty paise on a rupee of local cess levied under sub-section (1).

(2) A Taluk Board may pass a resolution to the effect that the rate of local cess surcharge under sub-section (2) may be increased to such rate not exceeding two rupees on a rupee of local cess as may be specified in such resolution.

ಅಂದರೆ ತಾಲ್ಲೂಕು ಬೋರ್ಡ್ ಒಂದು ನಿರ್ಣಯ ಪಾಸ್ ಮಾಡಿ ಆ ನಿರ್ಣಯದ ಪ್ರಕಾರ ಒಂದು ರೂಪಾಯಿ ಮೇಲೆ ೩ ರೂಪಾಯಿ ಸರ್‌ಚಾರ್ಜ್ ಹಾಕಬಹುದು ಎಂದು ಈ ಕ್ಲಾಸನ್ನು ಸೇರಿಸಿದ್ದಾರೆ. ಈ ಬಗ್ಗೆ ನಾನು ಒಂದು ಕ್ಲಾರಿಫಿಕೇಷನ್ ಕೇಳಲಿಕ್ಕೆ ಇಷ್ಟಪಡುತ್ತೇನೆ, ಸರ್ಕಾರ ಈಗಾಗಲೇ ೫ ಎಕರೆಯವರೆಗೆ ರೆವಿನ್ಯೂ ಟ್ಯಾಕ್ಸ್‌ವಿನಾಯ್ತಿ ತೋರಿಸಿರುವುದರಿಂದ ಎಕರೆಗೆ ಮೂರುರೂಪಾಯಿ ಎಂಟಾಣೆ ಸರ್‌ಚಾರ್ಜ್ ರೀತಿಯಲ್ಲಿಹಾಕುತ್ತಿದ್ದರೆ ಅದಕ್ಕೆ ಅನ್ವಯಿಸಬಾರದು. ೫ ಎಕರೆ ಮಿತಿಗೆ ಅನ್ವಯಿಸಬಾರದು ಎಂದು ನಾನು ಅಧ್ಯಕ್ಷರ ಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ. ಇನ್ನು ಗ್ರಾಮ ಪಂಚಾಯಿತಿಗಳು ತಾಲ್ಲೂಕು ಬೋರ್ಡ್‌ಗಳು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕಾದರೆ ಅವರಿಗೆ ಸಾಕಷ್ಟು ಆರ್ಥಿಕ ವ್ಯವಸ್ಥೆಯ ಸುಭದ್ರತೆಯನ್ನು ತಂದು ಕೊಡಬೇಕು. ಇವೊತ್ತು ಹಳ್ಳಿಯ ಗೃಹಗಳ ಮೇಲೆ ಟ್ಯಾಕ್ಸ್ ಹಾಕುತ್ತಿದ್ದಾರೆ. ಆದರೆ ಅದನ್ನು ವಸೂಲು ಮಾಡುವುದಕ್ಕಾಗುವುದಿಲ್ಲ. ಈ ಹಣವನ್ನು ವಸೂಲು ಮಾಡುವುದಕ್ಕೆ ಸರ್ಕಾರ ಒಂದು ಏಜೆನ್ಸಿಗೆ ಮಿಷನ್ ಪಡೆದುಕೊಂಡು ಬರತಕ್ಕ ಹಣವನ್ನು ಆಯಾಯಾ ತಾಲ್ಲೂಕು ಬೋರ್ಡ್‌ಗಳಿಗೆ ಆ ಪ್ರದೇಶದ ಗ್ರಾಮ ಪಂಚಾಯಿತಿಗಳಿಗೆ ಕೊಡುವುದಾದರೆ ಅದರಿಂದ ಪರಿಣಾಮಕಾರಿಯಾದಂತಹ ಕೆಲಸ ಆಗಬಹುದು ಎಂದು ಹೇಳುತ್ತೇನೆ. ಇನ್ನು ತಾಲ್ಲೂಕು ಬೋರ್ಡ್‌ಗೆ ಪ್ರೈಮರಿ ಸ್ಕೂಲುಗಳನ್ನು, ಫ್ರೀ ಪ್ರೈಮರಿ ಸ್ಕೂಲುಗಳನ್ನು ವಹಿಸಬೇಕು ಎಂದು ಏನು ತೀರ್ಮಾನ ತೆಗೆದುಕೊಂಡಿದ್ದಾರೆ ಅದು ಸ್ತುತಾರ್ಹವಾದುದು. ಒಂದು ತಾಲ್ಲೂಕಿನಲ್ಲಿ ನನ್ನ ಅಂದಾಜು ಪ್ರಕಾರ ಸುಮಾರು ೭೦೦-೮೦೦ ಜನ ಉಪಾಧ್ಯಾಯರು ಕೆಲಸ ಮಾಡುತ್ತಾ ಇರುತ್ತಾರೆ. ಆದರೆ ಕೆಲವರು ಆದರಲ್ಲಿ ಸರಿಯಾಗಿ ಸ್ಕೂಲ್‌ಗೆ ಹೋಗುವುದಿಲ್ಲ. ಅಲ್ಲಿ ಒಬ್ಬರನ್ನು ಡೆಪ್ಯುಟಿ ಮಾಡಿಬಿಟ್ಟು ಇನ್ನು ಬೇರೆಯವರು ಬೇರೆ ವ್ಯವಹಾರ ಮಾಡಿಕೊಳ್ಳುವ ಕೆಲಸ ಮಾಡುತ್ತಿರುತ್ತಾರೆ. ಈ ತಾಲ್ಲೂಕು ಬೋರ್ಡ್‌ನವರು ಅಂತಾದ್ದನ್ನು ಚೆಕ್ ಮಾಡುವ ಕೆಲಸ ಮಾಡಿದಂತಾಗುತ್ತದೆ. ಇನ್ನು ನಮ್ಮ ಸ್ನೇಹಿತರಾದ ಶ್ರೀಮಾನ್ ನಾರಾಯಣಪ್ಪನವರು ಈ ಪಂಚಾಯಿತಿಗಳಿಗೆ ಸ್ಕೂಲುಗಳ ಬಗ್ಗೆ ವಹಿಸಬೇಕಾದರೆ ಬಹಳ ಪರಿಣಾಮಕಾರಿ ಕೆಲಸವಾಗುತ್ತದೆ ಎಂದು ಹೇಳುತ್ತಾ ತಾಲ್ಲೂಕ್ ಬೋರ್ಡ್‌ಗಳಿಗೆ ಇಂತಿಷ್ಟು ಹಣ ಕೊಡಬೇಕು ಎಂದು ಹೇಳಿದರು. ೪-೫ ಕೋಟಿ ರೂಪಾಯಿಗಳನ್ನು ತಾಲ್ಲೂಕು ಬೋರ್ಡುಗಳಿಗೆ ಕೊಡುತ್ತೀರಿ, ಇದರಲ್ಲಿ ಯಾವ ಕೆಲಸವನ್ನು ಮಾಡುವುದಕ್ಕಾಗುತ್ತದೆ ? ಕನಿಷ್ಟಪಕ್ಷ ೧೨ ಕೋಟಿ ರೂಪಾಯಿಗಳನ್ನಾದರೂ ಕೊಡುವುದಾದರೆ ತಾಲ್ಲೂಕು ಬೋರ್ಡುಗಳು ಆರ್ಥಿಕವಾಗಿ ಭದ್ರತೆಯನ್ನು ಪಡೆಯುತ್ತವೆ. ಆರ್ಥಿಕವಾಗಿ ಭದ್ರತೆಯನ್ನು ಪಡೆದರೆ ಅವುಗಳು ಪರಿಣಾಮಕಾರಿಯಾಗಿ ಆರ್ಥಿಕವಾಗಿ, ಸಾಮಾಜಿಕವಾಗಿ ಎಲ್ಲರಂಗದಲ್ಲಿಯೂ ತನ್ನ ಕೆಲಸವನ್ನು ಮಾಡುತ್ತವೆ. ಪಾಶ್ಚಾತ್ಯ ಪ್ರಭಾಕರ್‌ರವರು ರೆವಿನ್ಯೂ ಇಲಾಖೆಗಿಂತಲೂ ಪ್ರಾಮುಖ್ಯವಾದಂತ ಇಲಾಖೆಯನ್ನು ಹೊಂದಿದ್ದಾರೆ. ಈ ಇಲಾಖೆಯಲ್ಲಿ

ಉತ್ತಮವಾದಂತ ಕೆಲಸವನ್ನು ಮಾನ್ಯ ಪ್ರಭಾಕರ್‌ರವರು ಮಾಡುತ್ತಾರೆಂದು ನಂಬಿ ಈ ಮಸೂದೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ. ಎಂ.

† ಶ್ರೀ ಎಸ್.ಎಂ. ಶಿರ್ನಾಳಿ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಪಂಚಾಯಿತ್ ರಾಜ್ಯ ಸಚಿವರು ತಂದಿರತಕ್ಕಂಥ ಈ ತಿದ್ದುಪಡಿ ಮಸೂದೆಯನ್ನು ಬೆಂಬಲಿಸಿ ಕೆಲವು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಮಹಾತ್ಮಾಜೀಯವರು ವಿಕೇಂದ್ರೀಕರಣ ತತ್ವದ ಮೇಲೆ ಪಂಚಾಯ್ತಿ ರಾಜ್ಯಗಳು ಉದ್ಭವವಾದವು. ಇವುಗಳ ಬಗ್ಗೆ ನಾವು ಇವತ್ತು ಕೂತು ಯೋಚನೆ ಮಾಡತಕ್ಕ ಕಾಲ ಸನ್ನಿಹಿತವಾಗಿದೆ. ಈ ಮಾತನ್ನು ಹೇಳಬೇಗತ್ಯಂತರವಿಲ್ಲ. ಇವತ್ತು ಬಹಳಷ್ಟು ತಾಲ್ಲೂಕು ಬೋರ್ಡ್‌ಗಳಲ್ಲಿ ಆಲ್ಲಿ ಕೆಲಸ ಮಾಡತಕ್ಕ ನೌಕರರಿಗೆ ಸಂಬಳ ಕೊಡುವುದಕ್ಕಾಗುವುದಿಲ್ಲ. ಆದರಲ್ಲಿಯೂ ನಮ್ಮ ಮಲೆನಾಡಿನ ಭಾಗದಲ್ಲಿರತಕ್ಕ ಬೋರ್ಡ್‌ಗಳಪರು ಅರಣ್ಯ ಉತ್ಪತ್ತಿಯಲ್ಲಿ ೨ ಪರ್ಸೆಂಟ್ ಕೊಡಿ ಎಂದು ಸತತವಾಗಿ ಕೇಳುತ್ತಲೇ ಬಂದಿದ್ದೇವೆ. ಆದರೂ ಮಾನ್ಯ ಪ್ರಭಾಕರರ್‌ಪರು ಕೊಡುವ್ದಕ್ಕೆ ಬರಲಿಲ್ಲ ಅಂತ ಕಾಣುತ್ತೆ, ಅರಣ್ಯ ಉತ್ಪತ್ತಿಯಲ್ಲಿ ೨ ಪರ್ಸೆಂಟ್ ಕೊಟ್ಟರೆ, ನಮ್ಮ ಭಾಗದ ತಾಲ್ಲೂಕು ಬೋರ್ಡ್‌ಗಳು ಬದುಕಿಕೊಳ್ಳುತ್ತವೆ. ಇವತ್ತು ೩೦ ಪರ್ಸೆಂಟ್ ಇನ್‌ಕಂ ರೆವಿನ್ಯೂನಲ್ಲಿ ಬರುತ್ತದೆ. ಮಲೆನಾಡು ಭಾಗದಲ್ಲಿ ರೆವಿನ್ಯೂ ಜಮೀನು ೨೦ ಪರ್ಸೆಂಟ್ ಇದೆ, ಉಳಿಕೆ ೮೦ ಪರ್ಸೆಂಟ್ ಅರಣ್ಯಕ್ಕೆ ಸೇರಿದ ಭೂಮಿಯೇ ಇದೆ. ಅದು ಕೂಡ ಮಳೆನೀರಿನ ಆಶ್ರಯದ ಜಮೀನುಗಳು. ವಾಟರ್ ಸೆಸ್ ಕೂಡ ಕೊಡುವುದಿಲ್ಲ. ಹೊಸನಗರ ಸಾಗರ ಇಂಥ ಕಡೆಗಳಲ್ಲಿ ಇಂಥ ಒಂದು ವ್ಯವಸ್ಥೆ ಇದೆ. ನಮ್ಮ ತಾಲ್ಲೂಕಿನಲ್ಲಿ ಸುಮಾರು ಒಂದು ಲಕ್ಷ ರೂಪಾಯಿ ಕಂದಾಯ ಬರುತ್ತದೆ. ೩೦ ಪರ್ಸೆಂಟ್ ಅಂದರೆ ೩೦ ಸಾವಿರ ರೂಪಾಯಿ ತಾಲ್ಲೂಕು ಬೋರ್ಡುಗಳಿಗೆ ಬರುತ್ತದೆ. ಇದರಲ್ಲಿ ಸಿಬ್ಬಂದಿಗೆ ಸಂಬಳ ಜೀಪು ಕೊಟ್ಟಿದ್ದಾರೆ, ಆದಕ್ಕೆ ಪೆಟ್ರೋಲ್ ಇದನೆಲ್ಲಾ ನೋಡಿಕೊಳ್ಳಬೇಕು. ಇಂಥ ಒಂದು ಪರಿಸ್ಥಿತಿ ತಾಲ್ಲೂಕು ಬೋರ್ಡುಗಳಲ್ಲಿ ಇರುವಾಗ, ಅವುಗಳ ಸಕ್ರಿಯವಾಗಿ ಕೆಲಸ ಮಾಡತಕ್ಕದ್ದು ಹೇಗೆ ಎಂದು ಕೇಳಬೇಕಾಗಿದೆ ವಿಕೇಂದ್ರೀಕರಣ ಬೇಡ ಅಂದರೆ ಬಿಟ್ಟುಬಿಡಿ, ಎಲ್ಲವೂ ಸರ್ಕಾರವೇ ನೋಡಿಕೊಳ್ಳಲಿ. ರಾಜಕೀಯದಲ್ಲಿ ಒಬ್ಬ ಇದ್ದು ಅವನು ಶಾಸನಸಭೆಗೆ ಬರುವುದಕ್ಕಾಗುವುದಿಲ್ಲ. ಅವನನ್ನು ತಾಲ್ಲೂಕು ಬೋರ್ಡಿಗೋ, ಪಂಚಾಯಿತಿಗೆ ಅಧ್ಯಕ್ಷನನ್ನಾಗಿಯೋ ಮಾಡುವುದಕ್ಕೆ ಹೊರಟರೆ ಕಷ್ಟವಾಗುತ್ತದೆ. ಅಲ್ಲದೆ ಇದರಲ್ಲಿ ದಲಿತ ವರ್ಗಕ್ಕೆ ೧೮ ಪರ್ಸೆಂಟ್ ಖರ್ಚು ಮಾಡಬೇಕೆಂದು ಹೇಳುತ್ತಿದ್ದೀರಿ. ಮೂರು ಕಾಸಿನ ಉತ್ಪತ್ತಿ ಇಲ್ಲದೇ ಇರುವಾಗ ಏನು ಖರ್ಚು ಮಾಡುವುದಕ್ಕೆ ಆಗುತ್ತದೆ ? ಏನು ಕೆಲಸ ಮಾಡುವುದಕ್ಕೆ ಆಗುತ್ತದೆ. ಇಬ್ಬರು ಹರಿಜನರಿಗೆ ಕುರಿ ಕೊಟ್ಟರೆ ? ಹಸು ಕೊಟ್ಟರೆ ? ಎತ್ತಿನ ಜೋಡಿ ಕೊಟ್ಟರೆ ಸಾಕಾಗುತ್ತದೆಯೇ ತೃಪ್ತಿ ಆಗುತ್ತದೆಯೇ ? ಆಗಬೇಕಾದ ಕೆಲಸವನ್ನು ಹೆಚ್ಚು ಮಾಡಬೇಕಾದರೆ ಹಣದ ಅವಶ್ಯಕತೆ ಬೇಕು. ನಾನು ಹೇಳಿದಹಾಗೆ ಹೇರಳವಾಗಿ ಅರಣ್ಯ ಉತ್ಪತ್ತಿ ಇರುವಾಗ, ಎರಡು ಪರ್ಸೆಂಟ್ ಕೊಟ್ಟರೆ ತಾಲ್ಲೂಕು ಬೋರ್ಡುಗಳು ಮತ್ತು ಪಂಚಾಯಿತಿಗಳು ಬದುಕಿಕೊಳ್ಳುತ್ತವೆ. ಇದನ್ನು ಮಾಡದೇ ಹೋದರೆ ನಾವು ಕಾವಸ್ತೆಗೆ ತಾಲ್ಲೂಕು ಬೋರ್ಡುಗಳು, ಪಂಚಾಯ್ತಿಗಳು ಇದ್ದಹಾಗೆ ಆಗುತ್ತದೆ. ಪಂಚಾಯ್ತಿಗಳ ಬಡ್ಜೆಟ್ ಆದರೂ ಕೂಡ ೨–೩ ಸಾವಿರ ರೂಪಾಯಿಗಳು ಈ ಹಣದಲ್ಲಿ ಏನು ಕೆಲಸ ಮಾಡುವುದಕ್ಕೆ ಆಗುತ್ತದೆ ತಾವೇ ಯೋಚನೆ ಮಾಡಿ. ಕಡ್ಡಿವುರಿ ದುಡ್ಡಾಗುತ್ತದೆ., ಕೆಲವು ಪಂಚಾಯ್ತಿಗಳಲ್ಲಿ ಹೇರಳವಾಗಿ ಉತ್ಪತ್ತಿ ಇದ್ದರೂ ಕೂಡ ಕೆಲಸ ಮಾಡುವುದಿಲ್ಲ, ನಮ್ಮ ಜಿಲ್ಲೆಗಳಲ್ಲಿ ಕೆಲವು ಪಂಚಾಯ್ತಿಗಳಿಗೆ ೩೦,೦೦೦ ರಿಂದ ೭೦ ಸಾವಿರ ರೂಪಾಯಿ ಉತ್ಪತ್ತಿ ಇದ್ದರೂ ಖರ್ಚು ಮಾಡುವುದಿಲ್ಲ, ಅವುಗಳ ಮೇಲೆ ಸರ್ಕಾರ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಆಲ್ಲಿರತಕ್ಕ ಅಧ್ಯಕ್ಷರು ಮತ್ತು ಛೇರ್ಮನರುಗಳನ್ನು ಮಾತನಾಡಿಸುವುದಕ್ಕೆ ಆಗುವುದಿಲ್ಲ, ೨೦ ಅಂಶಗಳ ಕಾರ್ಯಕ್ರಮದ ಮೇರೆಗೆ ಎಷ್ಟು ಪಂಚಾಯ್ತಿಗಳ ಸಕ್ರಿಯವಾಗಿ ಕೆಲಸ ಮಾಡಿವೆ ಎಂದು ಪರಿಶೀಲನೆ ಮಾಡಿದ್ದೀರಾ ಸ್ವಾಮಿ ? ಎಷ್ಟೋ ಪಂಚಾಯ್ತಿಗಳು ಈ ಕಡೆ ನಿಗಾ ಕೂಡ ಕೊಟ್ಟಿಲ್ಲ. ಇವುಗಳ ಮೇಲೆ ಸರ್ಕಾರಕ್ಕೆ ಯಾವುದೇ ರೀತಿಯ ಕಂಟ್ರೋಲ್ ಕೂಡ ಇಲ್ಲ. ಈವೊತ್ತು ಈ ವಿಚಾರದಲ್ಲಿ ಸಮಗ್ರವಾಗಿ ಯೋಚನೆ ಮಾಡಬೇಕಾದ ಪರಿಸ್ಥಿತಿ ಬಂದಿದೆ. ತಮ್ಮ ಇಲಾಖೆ ಅಂತಿಂಥ ಇಲಾಖೆ ಏನೂ ಅಲ್ಲ, ಬಹಳ ಪ್ರಾಮುಖ್ಯವಾದ ಇಲಾಖೆ, ಸ್ಥಳೀಯ ಸಂಸ್ಥೆಗಳ ಮೂಲಕ ಯಾವ ಒಂದು ವರ್ಗ ನೇರವಾಗಿ ತುಳಿಯಲ್ಪಟ್ಟಿತೋ ? ಆ ಒಂದು ಮಾರ್ಗಕ್ಕೆ ಇವತ್ತು ಕೆಲಸ ಆಗಬೇಕಾಗಿದೆ. ಸದೃಡವಾಗಿರುವಂತ ನಮ್ಮಂತವರಿಗೆ ಏನು ಕೆಲಸ ಆಗಬೇಕಾಗಿಲ್ಲ ವಿಟಮಿನ್

(ಎಂ) ಶಕ್ತಿಯನ್ನು ಒದಗಿಸಿಕೊಡದೇ ಹೋದರೆ ಯಾವ ಕೆಲಸವನ್ನೂ ಕೂಡ ಮಾಡುವುದಕ್ಕಾಗುವುದಿಲ್ಲ. ಮೀಟಿಂಗ್ ಮಾಡುತ್ತಾರೆ ಕಾಫಿ ಕುಡಿತ್ತಾರೆ ಹೋಗುತ್ತಾರೆ. ಕೆಲವು ಪಂಚಾಯ್ತಿಗಳಲ್ಲಿ ಪ್ರೊಸೀಡಿಂಗ್ಸ್ ಬರೆದು ಮನೆಗೆ ಕಳುಹಿಸಿ ರುಜು ಹಾಕಿಸಿಕೊಳ್ಳುತ್ತಾರೆ. ಲೆಕ್ಕದಲ್ಲಿ ಮಾತ್ರ ಮೀಟಿಂಗ್ ಮಾಡಿದ್ದೇವೆಂದು ಬರೆಯುತ್ತಾರೆ. ಮೇಲಾಧಿಕಾರಿಗಳಿಗೆ ತೋರಿಸಲಿಕ್ಕಾಗಿ ಇದನ್ನು ಮಾಡುತ್ತಾರೆ. ಇವುಗಳಿಗೆ ಕಾಯಕಲ್ಪ ಮಾಡಬೇಕು. ತಾವು ತಂದಿರತಕ್ಕ ತಿದ್ದುಪಡಿ ಮಸೂದೆಯಲ್ಲಿ ಬಹಳ ಪ್ರಾಮುಖ್ಯವಾದುದ್ದು ಅಂದರೆ ದಲಿತವರ್ಗದವರಿಗೆ ಖರ್ಚು ಮಾಡುವ ೧೮ ಪರ್ಸೆಂಟ್ ಹಣದ ಮೇಲ್ವಿಚಾರಣೆ ನೋಡತಕ್ಕ ಸಂಸ್ಥೆ, ಇದು ಬಹಳ ಅವಶ್ಯಕವಾದಂತಾದ್ದು. ಎಷ್ಟೋ ಸಂಸ್ಥೆಗಳು ಖರ್ಚು ಮಾಡದೆ ಲ್ಯಾಪ್ಸ್ ಮಾಡಿರತಕ್ಕಂಥಾದ್ದು ಇದೆ. ಅಲ್ಲದೆ, ಆ ಕ್ಷೇತ್ರದ ಶಾಸಕರುಗಳು ಭಾಗವಹಿಸುವುದಕ್ಕೆ ಅವಕಾಶ ಕೊಟ್ಟಿದ್ದೀರಿ, ಯಾವ ಶಾಸಕ ನೇರವಾಗಿ ಆ ಒಂದು ಭಾಗದಿಂದ ಪ್ರತಿನಿಧಿಸಿರುತ್ತಾನೆ. ಅವನು ಮಾತ್ರ ಮತ ಕೊಡುವುದಕ್ಕೆ ಅವಕಾಶ ಕೊಟ್ಟಿರುವುದು ಬಹಳ ಶ್ರೇಷ್ಠವಾದುದ್ದು. ಇಲ್ಲಿ ಕಾನೂನನ್ನು ನಾವು ಹೇಗೆ ಬೇಕಾದರೂ ಹಾಗೆ ಬದಲಾಯಿಸಿಕೊಳ್ಳಬಹುದು. ಎರಡು ತಾಲ್ಲೂಕುಗಳು ಇರುವ ಕಡೆ ಶಾಸಕರುಗಳು ಮತಬ್ರಮಣೆ ಉಂಟು ಮಾಡಿಕೊಳ್ಳಬಹುದು. ಹಿಂದೆ ಕಾನೂನು ಮಾಡಬೇಕಾದರೆ ಆ ಕ್ಷೇತ್ರದ ಪ್ರತಿನಿಧಿ ಯಾರು ಆಗಿರುತ್ತಾರೋ ಅವರು ಭಾಗವಹಿಸಬೇಕು ಅಂತ ಮಾಡಲಾಗಿತ್ತು. ಇವತ್ತು ನಾವು ಕಾನೂನನ್ನು ಹೇಗೆ ಬೇಕಾದರೆ ಹಾಗೆ ತಿರುಗಿಸಬಹುದು, ಕಾನೂನನ್ನು ಯಾವ ರೀತಿ ಬೇಕಾದರೂ ಬದಲಾಯಿಸಿಕೊಳ್ಳುವುದಕ್ಕೆ ಬರುತ್ತದೆ.

ನೇರವಾಗಿ ಸ್ಥಳೀಯ ಸಂಸ್ಥೆಗಳಿಗೆ ಪ್ರಾತಿನಿಧ್ಯವನ್ನು ಕೊಡುವ ಸಲುವಾಗಿ ತಾಲ್ಲೂಕು ಬೋರ್ಡ್‌ಗಳಿಗೆ ವಹಿಸತಕ್ಕಂಥ ಒಂದು ತಿದ್ದುಪಡಿಯನ್ನು ತಾವು ತರಿಸುವುದಕ್ಕೆ ಬಹಳ ದನ್ಯವಾದಗಳನ್ನು ಅರ್ಪಿಸುತ್ತೇನೆ.

ಇನ್ನು ತಾವು ಈವತ್ತು ಶಾಲೆಗಳನ್ನು ತಾಲ್ಲೂಕು ಬೋರ್ಡ್‌ಗಳಿಗೆ ವಹಿಸಿಕೊಡುತ್ತಿದ್ದೀರಿ. ಇದು ಒಂದು ಒಳ್ಳೆಯ ಕೆಲಸವೇ ಆಗಿರುತ್ತದೆ. ಇದಕ್ಕೆ ನನ್ನ ದನ್ಯವಾದಗಳು, ಏತಕ್ಕೆಂದರೆ ಉಪಾಧ್ಯಾಯರುಗಳು ಯಾರು ಅಲ್ಲಿರುತ್ತಾರೆ ಅವರನ್ನು ಕೇಳುವವರು ಹೇಳುವವರು ಯಾರು ಇರುವುದಿಲ್ಲ. ಸ್ಕೂಲ್ ಬಾಗಿಲನ್ನೂ ಕೂಡ ತೆಗೆಯುವುದಿಲ್ಲ. ಹಾಕಿದ ಬಾಗಿಲು ಹಾಕಿದ ಹಾಗೆಯೇ ಇರುತ ದೆ. ಅದರಲ್ಲೂ ನಮ್ಮ ಮಲೆನಾಡು ಸ್ಕೂಲ್‌ಗಳಲ್ಲಿ ಈ ರೀತಿ ನಡೆಯುತ್ತಿರುವುದು ಸರ್ವೇ ಸಾಧಾರಣವಾಗಿರುತ್ತದೆ. ಏತಕ್ಕೆಂದರೆ ಸ್ಕೂಲ್ ಇನ್‌ಸ್ಪೆಕ್ಟರ್ ಯಾರು ಇರುತ್ತಾರೆ ಅವರು ಇತ್ತ ಕಡೆ ಮುಖವನ್ನು ಕೂ ತೋರಿಸುವುದಿಲ್ಲ. ವರ್ಷಕ್ಕೆ ಒಂದಾವರ್ತಿ ಕಾಣಿಸುವುದು ಬಹಳ ಕಷ್ಟಕರವಾಗಿರುತ್ತದೆ. ಉಪಾಧ್ಯಾಯರುಗಳು ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲಿದ್ದುಕೊಂಡು ಹೋಟೆಲ್ ತಿಂಡಿ ತಿಂದುಕೊಂಡು ಸಿನಿಮಾ ನೋಡಿಕೊಂಡು ಇರುತ್ತಾರೆ. ಇಲ್ಲಿ ಹಳ್ಳಿಗಳಲ್ಲಿ ಮಕ್ಕಳಗತಿ ದೇವರೇ ಗತಿಯಾಗಿರುತ್ತದೆ, ಇಂಥ ಅವ್ಯವಸ್ಥೆಯು ಶಾಲೆಗಳಲ್ಲಿ ನಡೆಯುತ್ತಿರುವುದರಿಂದ ಅವುಗಳನ್ನು ತಾಲ್ಲೂಕ್ ಬೋರ್ಡ್‌ಗಳಿಗೆ ವಹಿಸಿಕೊಟ್ಟಿರುವುದು ಸರಿಯೆಂದು ನನ್ನ ಅಭಿಪ್ರಾಯವಾಗಿರುತ್ತದೆ. ಇದನ್ನು ವಹಿಸಿಕೊಟ್ಟ ಮಾತ್ರಕ್ಕೆ ಸಾಲುವುದಿಲ್ಲ, ಅದರ ಜೊತೆಗೆ ಆರ್ಥಿಕ ನೆರವನ್ನೂ ಕೂಡ ಒದಗಿಸಿಕೋಡಬೇಕಾಗಿರುತ್ತದೆ. ಏತಕ್ಕೆಂದರೆ ಶಾಲೆಗಳ ಕಟ್ಟಡಗಳನ್ನು ಕಟ್ಟುವುದಕ್ಕೆ, ದುರಸ್ತಿಮಾಡುವುದಕ್ಕೆ ಅವಕಾಶವಿಲ್ಲದೆ ಇದ್ದರೆ ಕೊಟ್ಟೂ ಕೂಡ ಏನು ಪ್ರಯೋಜನವಿರುವುದಿಲ್ಲ. ಇದು ಏನಾಗುತ್ತದೆ ಎಂದರೆ '' ನನ್ನ ಗಂಡನೂ ಜಮೇದಾರ್ ಎಂದು ಹೇಳಿದಂತಾಗುತ್ತದೆ. ಪಂಚಾಯಿತಿ ರಾಜ್ಯ ಸಂಸ್ಥೆಗಳನ್ನು ನಿರ್ಮಾಣ ಮಾಡಿದ ಮೇಲೆ ಹಂತಹಂತವಾಗಿ ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಕ್ಕೆ ಪೂರ್ಣವಾದಂಥ ಜವಾಬ್ದಾರಿಯನ್ನು ಅವರಿಗೆ ಕೊಡದೆ ಹೋದರೆ ಆದು ತತ್ವಕ್ಕೆ ವಿರುದ್ಧವಾದಂತಾಗುತ್ತದೆಂದು ನನ್ನವಾದ. ಪಂಚಾಯಿತಿ ರಾಜ್ಯ ಸಂಸ್ಥೆಗಳನ್ನು ನಿರ್ಮಾಣ ಮಾಡಿದ ಮೇಲೆ ಗ್ರಾಮಾಂತರ ಪ್ರದೇಶಗಲ್ಲಿರತಕ್ಕಂಥ ಜನರು ಗ್ರಾಮ ಅಭಿವೃದ್ಧಿಗಾಗಿ ಏನು ಸವಲತ್ತುಗಳನ್ನು ಕೇಳುತ್ತಾರೋ ಅದೆಲ್ಲವನ್ನು ಕಲ್ಪಿಸಿಕೊಡಬೇಕು. ಆ ರೀತಿ ಸವಲತ್ತುಗಳನ್ನು ಒದಗಿಸಿಕೊಡದಿದ್ದರೆ ತಮ್ಮ ಉದ್ದೇಶವು ಸಫಲವಾಗುವುದಿಲ್ಲವೆಂದು ಹೇಳುತ್ತೇನೆ. ನಮ್ಮ ಮಾನ್ಯ ಮಿತ್ರರಾದ ಶ್ರೀ ಎಂ. ವಿ. ರಾಜಶೇಖರನ್‌ರವರು ಹೇಳಿದರು. ಅವನ್ನು ನಾನು ಒಪ್ಪುತ್ತೇನೆ. ಏತಕೆಂದರೆ ಹಿಂದೆ ಒಂದು ಕಾಲದಲ್ಲಿ ಜಿಲ್ಲಾ ಪರಿಷತ್ತುಗಳೆಂದು ಇದ್ದವು. ಅವುಗಳನ್ನು ಏತಕ್ಕೋ ತಗೆದುಹಾಕಿದರೋ ಗೊತ್ತಿಲ್ಲ. ಜಿಲ್ಲಾ ಬೋರ್ಡ್‌ಗಳು ಆಯಾ ಜಿಲ್ಲೆಯ ಸಮಗ್ರ ಅಭಿವೃದ್ಧಿಯ ಬಗ್ಗೆ ಯೋಜನೆಯನ್ನು ಮಾಡತಕ್ಕಂಥ ಒಂದು ಅವಕಾಶವನ್ನು ಸರ್ಕಾರದವರು ಕೊಟ್ಟಿದ್ದರು. ಇದರಿಂದ ಸರ್ಕಾರಕ್ಕೂ ಕೂಡ ತಲೆನೋವು ಕಡಿಮೆಯಾಗುತ್ತಿತ್ತು. ಈ ಗುತ್ತದೆ ಎಂದರೆ ಯಾವುದೇ ಕೆಲಸವಾಗಬೇಕಿದ್ದರೂ

ವಿಧಾನಸೌಧಾಕ್ಕೆ ಬರಬೇಕಾಗಿರುತ್ತದೆ. ಅಲ್ಲಿ ಕೆಲಸ ಮಾಡತಕ್ಕಂಥವರು ಇಲ್ಲದೆ ಇರುವುದರಿಂದ ಇಲ್ಲಿಗೆ ಬರುತ್ತಾರೆ. ಆ ಒಂದು ದೃಷ್ಟಿಯಿಂದ ಆಯಾ ಹೆಂತದಲ್ಲಿ ಆಡಳಿತದಲ್ಲಿ ವ್ಯವಸ್ಥೆಯನ್ನು ಮಾಡುವುದರಿಂದ ಸರ್ಕಾರಕ್ಕೆ ಜವಾಬ್ದಾರಿಯೂ ಕೂಡ ಕಡಿಮೆಯಾಗುತ್ತದೆ ಏನ್ನುವುದೇ ನನ್ನ ವಾದವಾಗಿರುತ್ತದೆ. ಆದ್ದರಿಂದ ಈ ಎಲ್ಲಾ ದೃಷ್ಟಿಯಿಂದ ಸಮಗ್ರವಾದ ಒಂದು ಯೋಜನೆಯನ್ನು ಮಾಡಬೇಕೆಂದು ಹೇಳಿ ಅಧ್ಯಕ್ಷರು ಇಷ್ಟು ಕಾಲಾವಕಾಶವನ್ನು ಕಲ್ಪಿಸಿಕೊಟ್ಟಿದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವೈ ರಾಮಕೃಷ್ಣ (ಆನೇಕಲ್). ಸನ್ಮಾನ್ಯ ಅಧ್ಯಕ್ಷಣಿಯವರೇ ಈ ವಿಲೇಜ್ ಪಂಚಾಯತಿಗಳನ್ನು ತಾಲ್ಲೂಕು ಬೋರ್ಡುಗಳಿಗೆ ವಹಿಸಿಕೊಡತಕ್ಕಂಥ ತಿದ್ದುಪಡಿ ಏನು ಇದೆ ಇದು ಒಂದು ಕ್ರಾಂತಿಕಾರಕವಾದ ತಿದ್ದುಪಡಿಯಲ್ಲವೆಂದು ನಾನು ಭಾವಿಸುತ್ತೇನೆ. ಈಗತಾನೆ ಭಾಷಣ ಮಾಡಿದಂಥ ಶ್ರೀಮಾನ್ ಚಂದ್ರಶೇಖರ್‌ರವರು ಸ್ಥಳೀಯ ಸಂಸ್ಥೆಗಳಿಗೆ ಎಷ್ಟು ಪ್ರಾತಿನಿಧ್ಯವನ್ನು ಕೊಡಬೇಕಾಗಿತ್ತೋ ಅಷ್ಟು ಪ್ರಾತಿನಿಧ್ಯವನ್ನು ಕೊಟ್ಟಿಲ್ಲವೆಂದು ಹೇಳಿದರು ನಮಗೆ ಸ್ವರಾಜ್ಯಬಂದು ಮೂವತ್ತೊಂದು ವರ್ಷಗಳಾದರೂ ಕೂಡ ಸ್ಥಳೀಯ ಸಂಸ್ಥೆಗಳಿಗೆ ಸ್ವಯಂ ಆಡಳಿತ ಕೊಟ್ಟು ಅದರಲ್ಲಿ ನಂಬಿಕೆ ಇರತಕ್ಕಂಥ ಪ್ರಜಾಪ್ರಭುತ್ವವನ್ನು ನಿಜವಾಗಿಯೂ ಕೂಡ ಸ್ಥಾಪನೆ ಮಾಡಲಿಕ್ಕೆ ಇದುವರೆವಿಗೂ ಸಾಧ್ಯವಾಗಲಿಲ್ಲವೆಂದು ಬಹಳ ವ್ಯಥೆಯಿಂದ ಹೇಳಬೇಕಾಗಿದೆ. ಈಗ ತಂದಿರುವ ತಿದ್ದುಪಡಿ ನೋಡಿದಾಗ ಸಂತೋಷವೇನೋ ಆಗುತ್ತದೆ. ಆದರೆ ಇದು ಎಷ್ಟರಮಟ್ಟಿಗೆ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತದೆ ಎನ್ನುವ ವಿಚಾರದಲ್ಲಿ ನಾವು ಶಂಕೆಯನ್ನು ವ್ಯಕ್ತಪಡಿಸಬೇಕಾಗಿದೆ. ಇದರಲ್ಲಿ ಮೊದಲನೆಯದಾಗಿ ವಿಲೇಜ್ ಪಂಚಾಯತಿಗಳು ಮತ್ತು ತಾಲ್ಲೂಕು ಬೋರ್ಡುಗಳು ಎಫೆಕ್ಟೀವ್ ಆಗಿ ಅಂದರೆ ಚೆನ್ನಾಗಿ ಕೆಲಸಮಾಡಬೇಕಾದರೆ ಅವುಗಳಿಗೆ ಹೆಚ್ಚಿನ ಹಣ ಮತ್ತು ಅಧಿಕಾರ ಇವೆರಡನ್ನೂ ಬಹಳ ಮುಖ್ಯವಾಗಿ ಕೊಡಬೇಕು. ಹೆಚ್ಚಿನ ಹಣ ಇರಬೇಕೆಂದು ಹೇಳುವಾಗ ಬರೇ ಲೋಕಲ್ ರಿಸೋರ್ಸಿಸ್‌ನ್ನ ಅಪಲಂಬಿಸುವುದಾದರೆ ಬಹಳ ಕಷ್ಟಕರವಾಗುತ್ತದೆ. ಒಂದು ಸ್ಕೂಲನ್ನು ನಡೆಸಬೇಕಾದರೆ, ಒಂದು ಆಸ್ಪತ್ರೆಯನ್ನೇ ಆಗಲಿ ನಡೆಸುವುದಕ್ಕೆ ಹಣವನ್ನು ಅವರು ಎಲ್ಲಿಂದ ತರಬೇಕು ಎನ್ನುವ ಬಗ್ಗೆ ಈ ತಿದ್ದುಪಡಿಯಲ್ಲಿ ತಿಳಿಸಿಲ್ಲ. ತಾಲ್ಲೂಕು ಬೋರ್ಡ್‌ಗಳಿಗೆ ಅಭಿವೃದ್ಧಿ ಕಾರ್ಯಗಳಿಗಾಗಿ ಸರ್ಕಾರದವರು ಯಾವ ರೀತಿ ಗ್ರಾಂಟ್‌ಗಳನ್ನು ಒದಗಿಸಿಕೊಡುತ್ತಿದ್ದಾರೆ, ಅದೇ ರೀತಿಯಲ್ಲಿ ೭೫ ಪರ್ಸೆಂಟ್, ೫೦ ಪರ್ಸೆಂಟ್ ೨೫ ಪರ್ಸೆಂಟ್ ಗ್ರಾಂಟನ್ನು ಪಾಠ ಶಾಲೆಗಳಿಗಾಗಿಯೇ ವಿಂಗಡಿಸಲಾಗಿಟ್ಟಿದ್ದರೆ ಬಹಳ ಚೆನ್ನಾಗಿರುತ್ತಿತ್ತು ಎಂದು ಹೇಳುತ್ತೇನೆ. ಕಾನೂನಿನಲ್ಲಿ ತಿದ್ದುಪಡಿ ತಂದಮಾತ್ರಕ್ಕೆ ಕಾರ್ಯಸಾಧನೆ ಮಾಡಿದಂತಾಯಿತು ಎನ್ನುವ ವಿಚಾರವನ್ನು ಮಾನ್ಯ ಮಂತ್ರಿಗಳು ತಿಳಿದುಕೊಂಡರೆ ಅದು ನಿಜವಾಗಿಯೂ ತಪ್ಪಾಗುತ್ತದೆ. ಈಗ ಸರ್ಕಾರದವರು ಪಂಚಾಯತಿಗಳನ್ನು ತಾಲ್ಲೂಕು ಬೋರ್ಡ್‌ಗಳಿಗೆ ವಹಿಸಿಕೊಡತಕ್ಕಂಥಾದ್ದು ಸಂತೋಷದ ವಿಚಾರವಾದರೂ ಕೂಡ ಸರಿಯಾದ ಮೇಲ್‌ವಿಚಾರಣೆ ಇಟ್ಟು ಅದಕ್ಕೆ ಆದಾಯ ಒದಗಿಸಿಕೊಡತಕ್ಕಂಥ ವಿಚಾರದ ಕಡೆ ಹೆಚ್ಚಿನ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಹಿಂದೆ ೧೯೬೯ರಲ್ಲಿ ಒಂದು ಗೌವರ್ನಮೆಂಟ್ ಆರ್ಡರ್ ಇತ್ತು. ಅದೇನೆಂದರೆ ಯಾವ ತಾಲ್ಲೂಕಿನ ಬೋರ್ಡ್ ಸರಹದ್ದಿಗೆ ಸೇರಿರತಕ್ಕಂಥ ಗ್ರಾಮಗಳಲ್ಲಿ, ಮುಜರಾಯಿ ವರ್ಗದವರು, ಹರಿಜನ ಗಿರಿಜನ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಅತ್ಯಗತ್ಯವಾಗಿ ಸರ್ಕಾರದವರೇ ಹಣವನ್ನು ಕೊಡಬೇಕೆಂದು ಇತ್ತು. ಆ ಒಂದು ಆರ್ಡರ್ ಈಗ ಏನಾಗಿರುತ್ತದೋ ತಿಳಿದಿಲ್ಲ. ಆದು ಇದ್ದಪಕ್ಷದಲ್ಲಿ? ಕಳೆದ ಐದು ವರ್ಷಗಳಿಂದಲೂ ಅದನ್ನು ಜಾರಿಗೆ ತಂದಿಲ್ಲ. ಗೌವರ್ನಮೆಂಟ್ ಆರ್ಡರ್ ಆರ್ಡರ್ ಆಗಿಯೇ ಕುಳಿತಿರುತ್ತದೆ. ಆದ್ದರಿಂದ ಗೌವರ್ನಮೆಂಟ್ ಆರ್ಡರ್‌ಗೆ ಜೀವವನ್ನು ಕೊಟ್ಟು ಅದು ಚುರುಕಾಗಿ ಕೆಲಸ ಮಾಡಲು ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಸಲಹೆ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಜೊತೆಗೆ ಹರಿಜನ ಗಿರಿಜನ ಅಭಿವೃದ್ಧಿಗಾಗಿ ಒಂದು ಸಬ್ ಕಮಿಟಿಯನ್ನೂ ಕೂಡ ಮಾಡಬೇಕೆಂದು ಹೇಳುತ್ತೇನೆ.

ತಾಲ್ಲೂಕ್ ಬೋರ್ಡ್‌ನಲ್ಲಿ ಗೆದ್ದು ಬಂದಿರತಕ್ಕಂಥಾ ಎಲ್ಲಾ ಹರಿಜನ ಸದಸ್ಯರನ್ನೂ ಸೇರಿಸಿಬಿಟ್ಟು ನಿಮ್ಮ ಅಭಿವೃದ್ಧಿ ಮಾಡಿಕೊಳ್ಳಿರಿ ಎಂದರೆ ಅದರಿಂದ ಹರಿಜನರ ಕಲ್ಯಾಣ ಸಾಧಿಸಿದಂತೆ ಆಗುವುದಿಲ್ಲ. ಗೆದ್ದು ಬಂದ ಹರಿಜನರೆಲ್ಲಾ ಒಂದೇ ಕಡೆ ಸೇರಿಕೊಂಡು ಕಲ್ಯಾಣ ಮಾಡಿಕೊಂಡರೆ ಅದು ಸರಿಹೋಗುವುದಿಲ್ಲ. ಈ ಒಂದು ಹರಿಜನರ ಕಲ್ಯಾಣ ಆಗಬೇಕಾದ್ದು ಬೇರೆಯವರಿಂದ. ಆ ಕಮಿಟಿ ಎಫೆಕ್ಟೀವ್ ಆಗಿ ಕೆಲಸ ಮಾಡಬೇಕಾದರೆ ಪ್ರೆಸಿಡೆಂಟರು, ವೈಸ್‌ಪ್ರಸಿಡೆಂಟರು ಮತ್ತು ಬೇರೆ ಸದಸ್ಯರೂ ಕೂಡ ಇದರಲ್ಲಿ

ಇರಬೇಕು. ಈಗ ತಿದ್ದುಪಡಿ ಏನು ತಂದಿದ್ದೀರೋ ಅದನ್ನ ಬಿಟ್ಟು ಬೇಕಾದರೂ ಒಂದು ಸಬ್ ಕಮಿಟಿ ಮಾಡಬಹುದು. ತಾಲ್ಲೂಕು ಬೋರ್ಡ್‌ನಲ್ಲಿ ಗೆದ್ದು ಬಂದಂಥಾ ಹರಿಜನರನ್ನು ಸೇರಿಸಿಬಿಟ್ಟು ಅವರಲ್ಲೇ ಒಂದು ಕಮಿಟಿ ಮಾಡುವುದಾದರೆ ಇದರಿಂದ ಆ ಜನರ ಸಮಸ್ಯೆಗಳು ಎಷ್ಟರ ಮಟ್ಟಿಗೆ ಬಗೆಹರಿಸಬೇಕು ಎನ್ನುವ ಉದ್ದೇಶ ಇಟ್ಟುಕೊಂಡಿದ್ದಿರೋ ಅದು ನಿಜವಾಗಿಯೂ ಸಾಧ್ಯವಾಗಲಾರದು ಎಂದು ಹೇಳುತ್ತೇನೆ.

ಶ್ರೀ ಕೆ. ಪ್ರಭಾಕರ್.—ತಾಲ್ಲೂಕ್ ಬೋರ್ಡ್‌ನಲ್ಲಿ ಬರೇ ಹರಿಜನರೇ ಗೆದ್ದು ಬಂದರೂ ಕೂಡ ಅದರಲ್ಲಿ ಮಹಿಳೆಯರೂ ಸಹ ಗನ್ನು ಬರುತ್ತಾರೆ. ಅವರನ್ನೂ ಆ ಕಮಿಟಿಗೆ ತೆಗೆದುಕೊಂಡು ಜೊತೆಗೆ ಇಬ್ಬರು ಸಮಾಜ ಸುಧಾರಕರು ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಇಬ್ಬರು ಹೀಗೆಲ್ಲಾ ಬೇರೆ ಬೇರೆ ತೆಗೆದುಕೊಂಡು ಎಲ್ಲ ಕೆಲಸ ಮಾಡುತ್ತಾರೆ. ಆ ಕಮಿಟಿಯಲ್ಲಿ ಅಧ್ಯಕ್ಷರು ತಾಲ್ಲೂಕ್ ಬೋರ್ಡ್‌ನಲ್ಲಿ ಯಾರು ಅಧ್ಯಕ್ಷರಾಗಿರುತ್ತಾರೋ ಅವರೇ ಆದರ ಅಧ್ಯಕ್ಷರು. ಈ ರೀತಿಯಾಗಿ ತಾಲ್ಲೂಕ್ ಬೋರ್ಡ್‌ನಲ್ಲಿ ವ್ಯವಸ್ಥಿತವಾಗಿ ಕಾರ್ಯ ಚಟುವಟಿಕೆಗಳು ನಡೆದು ಅದು ಒಂದು ಹೆಚ್ಚಿನ ಕೆಲಸ ಮಾಡುವುದರಿಂದ ಅದೇ ರೀತಿಯಲ್ಲೂ ಈ ಗ್ರಾಮ ಪಂಚಾಯಿತಿಗಳಲ್ಲೂ ಇರಬೇಕು ಎನ್ನುವುದು ಇದರಲ್ಲಿ ಇದೆ.

ಶ್ರೀ ವೈ ರಾಮಕೃಷ್ಣ.—ನಾನು ಈ ಬಗ್ಗೆ ಹೇಳಿದ್ದು ಉದ್ದೇಶ ಇದರ ಬಗ್ಗೆ ಸ್ವಲ್ಪ ಎಫೆಕ್ಟೀವ್ ಆಗಿ ಕೆಲಸ ಮಾಡಬೇಕು ಎಂದು ಸ್ವಲ್ಪ ಖಾರವಾಗಿ ಹೇಳಿದ್ದು. ಅದೇನೇ ಇರಲಿ ಈಗ ಇದರಲ್ಲಿ ೧೮ ಪರ್ಸೆಂಟ್ ಗ್ಯಾರಂಟಿ ಕೊಡಬೇಕು ಅಂತ ಏನು ಇದೆ. ಅದು ಬಹಳ ಉತ್ತಮವಾದುದ್ದು. ತಾವು ಈ ಅಧಿಕಾರ ಪಡೆಸಿಕೊಂಡ ಮೇಲೆ ಎಷ್ಟು ತಾಲ್ಲೂಕು ಬೋರ್ಡ್‌ನವರು ಈ ೧೮ ಪರ್ಸೆಂಟ್ ಅನ್ನು ಉಪಯೋಗಿಸಿಲ್ಲಾ ಎನ್ನುವ ಬಗ್ಗೆ ಒಂದು ಸ್ಟ್ಯಾಟಿಸ್ಟಿಕ್ಸ್ ತರಿಸಿಕೊಂಡಿದ್ದೀರಾ ? ಒಂದಂ ವೇಳೆ ಅದರ ಬಗ್ಗೆ ಸ್ಟ್ಯಾಟಿಸ್ಟಿಕ್ಸ್ ತರಿಸಿಕೊಂಡಿದ್ದರೆ ಅವರು ಕಲ್ಯಾಣದ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ಆ ತಾಲ್ಲೂಕು ಬೋರ್ಡ್‌ನವರು ಹಾಕಿಕೊಂಡಿದ್ದಾರೆ ಅನ್ನುವ ವಿವರವನ್ನು ತಾವು ಉತ್ತರದಲ್ಲಿ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ನಾನು ನಿಜವಾಗಿ ಹೇಳಬೇಕಾದರೆ ಸಮ್ಮ ರಾಜ್ಯಾಂಗದಲ್ಲಿರ ತಕ್ಕಂಥಾ ಆರ್ಟಿಕಲ್ ಳಿಜರಲ್ಲಿ ಕಂಪಲ್ಸರಿ ಎಜುಕೇಷನ್ ಸ್ಕೀಂ ಅನ್ನುವುದು ಏನು ಇದೆ ಅವನ್ನು ಜಾರಿಗೆ ತರಬೇಕಾದರೆ ವಿಶೇಷವಾಗಿ ತಾಲ್ಲೂಕು ಬೋರ್ಡ್‌ನಲ್ಲಿ ಒಂದು ಸೋಷಿಯಲ್ ಜಸ್ಟೀಸ್ ಕಮಿಟಿ ಅಂತ ಮಾಡಿದ್ದೀರಿ ಅದೇ ರೀತಿಯಲ್ಲಿ ವಿಲೇಜ್ ಪಂಚಾಯಿತಿಯಲ್ಲೂ ಸಹ ಒಂದು ಕಮಿಟಿ ಮಾಡಿ ಆ ಮೂಲಕ ಕಂಪಲ್ಸರಿ ಎಜುಕೇಷನ್ ಸ್ಕೀಂ ತಂದರೆ ಅವರ ಒಂದು ವಿದ್ಯಾರ್ಹತೆ ಜಾಸ್ತಿ ಮಾಡಿದಂತಾಗುತ್ತದೆ. ಮತ್ತು ಆದರಿಂದ ಸಮಾಜದ ಸುಧಾರಣೆಯೂ ಕೂಡ ಆಗುವುದಲ್ಲದೆ ಸಮಾಜದ ಮೇಲೆ ಒಂದು ವಿಶೇಷವಾದ ಪರಿಣಾಮವೂ ಸಹ ಬೀಳುತ್ತದೆ ಸೋಷಿಯಲ್ ಜಸ್ಟೀಸ್ ಕಮಿಟಿ ಮತ್ತು ಕಂಪಲ್ಸರಿ ಎಜುಕೇಷನ್ ಸ್ಕೀಂ ಜಾರಿಗೆ ತರುವುದಕ್ಕೆ ತಾಲ್ಲೂಕ್ ಬೋರ್ಡ್‌ಗೆ ಮತ್ತು ವಿಲೇಜ್ ಪಂಚಾಯಿತಿಗಳಿಗೆ ಅವಕಾಶ ಮಾಡಿಕೊಡಿ. ಮತ್ತು ಈ ಬಗ್ಗೆ ಅವರಿಗೆ ಬೇಕಾದಂಥಾ ಮಿಷನರಿಗಳನ್ನು ತಾವು ಕೊಡಬೇಕು ಅಲ್ಲದೆ ಅವರ ಅವರ ಸಂಬಳ ಸಾರಿಗೆಗೆ ಪೂರ್ತಾ ಹಣವನ್ನು ತಾವು ಕೊಡುವುದಾದರೆ ಆ ಮುಖಾಂತರ ಕಂಪಲ್ಸರಿ ಎಜುಕೇಷನ್ ಸ್ಕೀಂ ಚೆನ್ನಾಗಿ ನಿರ್ವಹಣೆ ಮಾಡಿದಂತಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನೊಂದು ವಿಷಯ ಏನೆಂದರೆ ಲೈಸನ್ಸ್ ಕೊಡತಕ್ಕಂಥಾ ವಿಚಾರ. ವಿಲೇಜ್ ಪಂಚಾಯಿತಿ ಮತ್ತು ತಾಲ್ಲೂಕ್ ಬೋರ್ಡ್‌ಗಳು ಏನು ಇವೆ ಅವರವರ ಜ್ಯೂರಿಸ್‌ಡಿಕ್ಷನ್‌ನಲ್ಲಿ ಲೈಸನ್ಸ್ ಕೊಡುವಾಗ ಜಾತಿ ಹೆಸರಿನ ಮೇಲಾಗಲಿ ಅಥವಾ ಒಂದು ಸಂಘ ಸಂಸ್ಥೆಯ ಹೆಸರಿನ ಮೇಲಾಗಲಿ ಅದು ಸಾರ್ವಜನಿಕ ರೀತಿಯಲ್ಲಿ ಇದೆಯೋ ಏನನ್ನುವ ವಿವರವನ್ನು ಎಚ್ಚರಿಕೆ ಇಟ್ಟು ಚೆನ್ನಾಗಿ ತಿಳಿದುಕೊಂಡು ಲೈಸನ್ಸ್ ಕೊಡಬೇಕು ಎನ್ನುವುದನ್ನು ತಾವು ಅಧಿಕಾರಿಗಳಿಗೆ ಹೇಳಿಬೇಕು. ಸೆಕ್ಯುಲರ್ ಡೆಮಾಕ್ರಸಿಯನ್ನು ತಳಹದಿಯಲ್ಲೇ ಮಾಡಬೇಕು. ತಾಲ್ಲೂಕು ಬೋರ್ಡ್ ಮತ್ತು ವಿಲೇಜ್ ಪಂಚಾಯಿತಿ ಜ್ಯೂರಿಸ್‌ಡಿಕ್ಷನ್‌ನಲ್ಲಿ ಈ ಕಂಪಲ್ಸರಿ ಎಜುಕೇಷನ್ ಅನ್ನು ವಿಷ್ಯಾಯವಾಗಿ ಜಾರಿಗೆ ತಂದರೆ ಸಮಾಜದಲ್ಲೂ ಕೂಡ ಸುಧಾರಣೆಯಾಗುತ್ತದೆ. ಪಂಚಾಯಿತಿ ರಾಜ್ಯದಲ್ಲಿ ಸಮಾಜದ ಸುಧಾರಣೆ ಬಗ್ಗೆ ಇದನ್ನು ಯಾವ ರೀತಿ ಸುಧಾರಣೆ ಮಾಡಬೇಕೆಂದು ಸರ್ಕಾರಕ್ಕೆ ಬಲವಂತರಾವ್ ಮೆಹತಾ ಕಮಿಟಿಯವರು ಒಂದು ರಿಪೋರ್ಟ್‌ನ್ನು ಕೊಟ್ಟಿದ್ದಾರೆ. ಇದಲ್ಲದೆ ಅಶೋಕ ಮೆಹತಾ ಕಮಿಟಿಯವರೂ ಕೂಡ ಒಂದು ರಿಪೋರ್ಟ್‌ನ್ನು ಇಷ್ಟರಲ್ಲೇ ಕೊಡುವವರಿದ್ದಾರೆ. You are actually perpetuating untouchability. ಪಂಚಾಯಿತಿಗಳಲ್ಲಿ ಬಹಳ ಜನರು ಇದ್ದಾರೆ. ಆದಕಾರಣ ಈ ಸಮಾಜವು ಹಾಗೆಯೇ ಉಳಿದಿದೆ. ಈ ಬಗ್ಗೆ

ಶಾಸಕರು ಬಹಳ ಜವಾಬ್ದಾರಿಯಿಂದ ಕೆಲಸ ಮಾಡಬೇಕು. ತಾಲ್ಲೂಕ್ ಬೋರ್ಡ್ ಮತ್ತು ವಿಲೇಜ್ ಪಂಚಾಯಿತಿಗಳಲ್ಲಿ ಅಷ್ಟೇ ಅಲ್ಲ ಎಲ್ಲಾ ವಿಚಾರದಲ್ಲೂ ಅವರು ಕೆಲಸ ಮಾಡಬೇಕು, ಅವರನ್ನು ನಾವು ನಂಬಬೇಕು ಅಲ್ಲದೆ ಅವರಲ್ಲೂ ಕೂಡ ಇದರಬ್ಬೇ ಕಳಕಳಿ ಇರಬೇಕು, ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಸಮಾಜದ ಮೂಲ ಸಮಸ್ಯೆಗಳನ್ನು ಬಗೆಹರಿಸುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದ ಕ್ಕೋಸ್ಕರವಾಗಿ ತಾವು ಈ ತಿದ್ದುಪಡಿಗಳನ್ನು ತೆಗೆದುಕೊಂಡು ಬಂದಿದ್ದೀರಿ ಎಂದೂ ಸಹ ತಿಳಿದುಕೊಂಡಿದ್ದೇನೆ. ಸಮಗ್ರವಾಗಿ ತಂದಿರತಕ್ಕಂಥಾ ಈ ತಿದ್ದುಪಡಿಯಲ್ಲಿ ಹೆಚ್ಚು ಸಮರ್ಪಕವಾದ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ತಾವು ಏನು ಒಂದು ವಾದ ಇಟ್ಟಿದ್ದೀರಿ ಅದು ಒಳ್ಳೆಯದೇ. ಆದರೆ ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ ಸೋಷಿಯಲ್ ಜಸ್ಟೀಸ್ ಕಮಿಟಿ ಏನು ಒಂದು ಮಾಡಿದ್ದೀರಿ ಅದೇ ರೀತಿಯಲ್ಲಿ ಈ ವಿಲೇಜ್ ಪಂಚಾಯಿತಿಯಲ್ಲೂ ಕೂಡ ಈ ಒಂದು ಕಮಿಟಿ ಮಾಡಿ ಕಂಪಲ್ಸರಿ ಎಜುಕೇಷನ್ ಸ್ಕೀಂ ತರಬೇಕು ಎಂದು ಹೇಳುತ್ತೇನೆ.

ಇನ್ನು ಕೊನೆಯದಾಗಿ ಒಂದೇ ಒಂದು ವಿಚಾರವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಎಂ.ಎಲ್.ಎ. ಮತ್ತು ಎಂ.ಎಲ್.ಸಿ.ಗಳು ಈವೊತ್ತಿನ ದಿವಸ ಏನು ಇದ್ದಾರೆ ಆವರ ಮುಂದೆ ತಾವು ಈ ಅಮೆಂಡ್‌ಮೆಂಟನ್ನು ತಂದಿರುವುದು ಬಹಳ ಸಂತೋಷ. ಇದರಲ್ಲಿ ನನಗೆ ಅನಿಸುತ್ತದೆ ಯಾರೂ ಕೂಡ ಇದರಲ್ಲಿ ರಾಜಕೀಯ ಮಾಡಬಾರದು ಎಂದು ನಾನು ಸ್ಪಷ್ಟವಾಗಿದೆ ಹೇಳುತ್ತೇನೆ. ಎಂ.ಎಲ್.ಎ. ಎಂ.ಎಲ್.ಸಿ.ಗಳು ಇದರ ಬಗ್ಗೆ ಏನು ಸಲಹೆಗಳನ್ನು ಕೊಡುತ್ತಾರೋ ಆ ಎಲ್ಲಾ ಸಲಹೆಗಳನ್ನೂ, ಮತ್ತು ಡಿಸ್ಟ್ರಿಕ್ಟ್ ಕೌನ್ಸಿಲ್‌ನವರು ಏನು ಸಲಹೆಗಳನ್ನು ಕೊಡುತ್ತಾರೋ ಆ ಸಲಹೆಗಳನ್ನೂ ಮತ್ತು ತಾಲ್ಲೂಕ್ ಬೋರ್ಡ್‌ನವರು ಏನು ಸಲಹೆಗಳನ್ನು ಕೊಡುತ್ತಾರೋ ಆ ಸಲಹೆಗಳನ್ನೂ ಕೂಡ ತಾವು ತೆಗೆದುಕೊಳ್ಳಬೇಕು. ಮತ್ತು ಎಂ.ಎಲ್.ಎ. ಮತ್ತು ಎಂ.ಎಲ್.ಸಿ.ಗಳಿಗೆ ಈ ಎಲ್ಲಾ ಕಮಿಟಿಗಳಲ್ಲೂ ಸಹ ಪಾರ್ಟಿಸಿಪೇಟ್ ಮಾಡುವ ಹಕ್ಕು ಕೊಡಬೇಕು ಎಂದು ಹೇಳುತ್ತೇನೆ.

ಶ್ರೀ ವಿ.ಎಂ. ಫಾಡಿ,—ಹಾಗಾದರೆ ಮುನಿಸಿಪಲ್ ಕಾರ್ಪೊರೇಷನ್‌ಸಲ್ಲೂ ಕೂಡ ಈ ಮೆಂಬರ್ಸ್ ಏನು ಇದ್ದಾರೆ ಅವರಿಗೆ ಅದರಲ್ಲಿ ಪಾರ್ಟಿಸಿಪೇಟ್ ಮಾಡುವುದಕ್ಕೆ ಅವಕಾಶ ಕೊಡುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ನಾನು ಹೇಳುತ್ತಾ ಇರುವುದು ತಾಲ್ಲೂಕ್ ಬೋರ್ಡ್ ಮತ್ತು ರೂರಲ್ ಏರಿಯಾಸ್ ವಿಚಾರ ಹೇಳುತ್ತಿದ್ದೇನೆ. ಈ ಮೆಂಬರ್ಸ್ ಅನ್ನು ಅದರಲ್ಲಿ ಪಾರ್ಟಿಸಿಪೇಟ್ ಮಾಡುವುದಕ್ಕೆ ಅವಕಾಶ ಕೊಡಬೇಕು ಎಂದು ಹೇಳುತ್ತಿದ್ದೇನೆ. ಈಗ ಒಂದು ಉದಾಹರಣೆ ಹೇಳುವುದಾದರೆ ಮಾನ್ಯ ಮಂತ್ರಿಗಳು ಬೆಂಗಳೂರು ದಕ್ಷಿಣ ತಾಲ್ಲೂಕಿನಿಂದ ಎಲೆಕ್ಟ್ ಆಗಿದ್ದಾರೆ, ಅದರಲ್ಲಿ ಯಾವ ಕಾನೂನು ಇದೆಯೋ ಅದನ್ನೇ ಇದರಲ್ಲೂ ಅನುಸರಿಸ ಬಹುದಾಗಿತ್ತು ಎಂದು ನಾನು ಹೇಳುತ್ತೇನೆ. You have got personal knowledge of what happened 8 years ago when Taluk Board elections were held for the first time. ಆವರಿಂದ ಓಟು ಹಾಕಿಸಿಕೊಂಡಿದ್ದೀರಿ. ನೀವು ಆ ತಾಲ್ಲೂಕ್ ಬೋರ್ಡ್ ಅನ್ನು ರಚನೆ ಮಾಡಿದ್ದೀರಿ. ಈವೊತ್ತು ಅದರಲ್ಲಿ ಏನು ಆಡ್ಜಿಯಾಗಿದೆ ಹೇಳಿ. ಎಲ್ಲೋ ೧—೨ ತಾಲ್ಲೂಕ್ ಬೋರ್ಡ್‌ನಲ್ಲಿ ಸರಿಯಾಗಿ ಕೆಲಸ ನಡೆಯದೇ ಇದ್ದರೆ ರಾಜ್ಯದಲ್ಲಿರುವ ೧೭೮ ತಾಲ್ಲೂಕು ಬೋರ್ಡ್‌ಗಳಲ್ಲೂ ಕೂಡ ಇದೇ ರೀತಿ ಅಸ್ಪಯಿಸುವ ಹಾಗೆ ಈ ಕಾನೂನು ತಂದರಲ್ಲಾ ಅದಕ್ಕೆ ಏನು ಹೇಳಬೇಕೋ ನನಗೆ ಗೊತ್ತಾಗುವುದಿಲ್ಲ. ಈ ಒಂದು ಕಾನೂನನ್ನು ಸಮಗ್ರವಾಗಿ ಪರಿಶೀಲನೆ ಮಾಡಿ ಇದರಲ್ಲಿ ಏನಾದರೂ ರಾಜಕೀಯ ಸಮಸ್ಯೆಗಳು ಇದ್ದರೆ ಅದನ್ನು ದೂರ ಮಾಡಿ ತಾಲ್ಲೂಕ್ ಬೋರ್ಡ್ ಅಭಿವೃದ್ಧಿಯಾಗುವಂತೆ ಆ ಸದಸ್ಯರುಗಳೂ ಸಹ ಚೆನ್ನಾಗಿ ಕೆಲಸ ಮಾಡಿದರೆ ಒಳ್ಳೆಯದು ಎಂದು ನನಗೆ ಅನಿಸುತ್ತದೆ. ಬರೇ ಕಾನೂನು ಮಾಡಿದರೆ ಏನೂ ಪ್ರಯೋಜನವಾಗುವುದಿಲ್ಲ, ಅದನ್ನು ಸರಿಯಾಗಿ ಪರಿಪಾಲನೆ ಮಾಡಬೇಕು. ಇದನ್ನು ಎಷ್ಟರ ಮಟ್ಟಿಗೆ ಪರಿಪಾಲನೆ ಮಾಡುತ್ತಾರೆಂದು ಕಾದು ನೋಡಬೇಕಾಗಿದೆ. ಆದಷ್ಟು ಮಟ್ಟಿಗೆ ಇದರಲ್ಲಿ ಹೆಚ್ಚು ಸಂಪನ್ಮೂಲಗಳು ಬರುವ ಹಾಗೆ ಕೆಲಸ ಮಾಡಬೇಕಾಗಿದೆ. ಈ ಸಂದರ್ಭದಲ್ಲಿ ತಮಗೆ ಒಂದು ಮಾತು ಹೇಳುವುದೇನೆಂದರೆ ಮುಂದೆ ಏನಾದರೂ ಈ ತರಹವಾದ ತಿದ್ದುಪಡಿ ತರಬೇಕಾದ ಸಂದರ್ಭದಲ್ಲಿ ಬಲವಂತರಾವ್ ಮೆಹತಾ ಕಮಿಟಿ ರಿಪೋರ್ಟ್‌ನ್ನು ಜ್ಞಾಪಕ ಇಟ್ಟುಕೊಳ್ಳಿ. ಮೊದಲು ಅವರು ಈ ರಿಪೋರ್ಟ್ ಕೊಟ್ಟಿದ್ದನ್ನು we under estimate their capacity. ಆದುದರಿಂದಲೇನೇ ಹೀಗಾಯಿತು. ಮತ್ತು ಈ ಬಗ್ಗೆ ಇನ್ನೊಂದು ಅಶೋಕ ಮೆಹತಾ ಕಮಿಟಿ ರಿಪೋರ್ಟ್ ಇಷ್ಟರಲ್ಲೇ ಬರುವುದರಲ್ಲಿ ಇದೆ. ಇವೆರಡು ರಿಪೋರ್ಟ್‌ನ್ನೂ ಕೂಡ ತಾವು ಮುಂದಿಟ್ಟುಕೊಂಡು ಗ್ರಾಮ ಪಂಚಾಯಿತಿಗಳಲ್ಲಿ ಹೆಚ್ಚು ಸುಧಾರಣೆ ಮಾಡಲಿಕ್ಕೆ ಆ ಸಮಾಡದ ಒಂದು

ಅಭಿವೃದ್ಧಿಯನ್ನು ಮಾಡುವುದಕ್ಕೆ, ಆ ಜನರ ಒಂದು ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ಹೆಚ್ಚು ಕೆಲಸ ಮಾಡಿ. ಆ ರಿಪೋರ್ಟ್‌ನಲ್ಲಿ ಹೆಚ್ಚು ನಂಬಿಕೆ ಇಟ್ಟು ಪುರೆಯದೆ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡಿ. ಇಲ್ಲದೇ ಹೋದರೆ ಆ ಸಮಾಜದ ಒಂದು ಅಭಿವೃದ್ಧಿ ಮತ್ತು ಅವರ ಸಮಸ್ಯೆಗಳ ಬಗ್ಗೆ ನೀವು ಸರಿಯಾಗಿ ಗಮನ ಕೊಡದೇ ಹೋದರೆ ಪ್ರಜಾಪ್ರಭುತ್ವಕ್ಕೆ ತಿಲಾಂಜಲಿ ಕೊಟ್ಟ ಹಾಗೆ ಆಗುತ್ತದೆ ಎನ್ನುವ ಎಚ್ಚರಿಕೆಯ ನುಡಿ ಹೇಳುತ್ತೇನೆ. ತಮ್ಮ ಕಾಲದಲ್ಲಿ ಈ ಜನರ ಸಮಸ್ಯೆಗಳಿಗೆ ಪರಿಹಾರದ ಬಗ್ಗೆ ಶ್ರಮ ವಹಿಸಿ ಹೆಚ್ಚಿನ ಹಣದ ಪರಿಹಾರ ಮತ್ತು ಹೆಚ್ಚಿನ ಅಧಿಕಾರ ಕೊಟ್ಟು ಅವರು ಜೀವಂತವಾಗಿ ಕೆಲಸ ಮಾಡಿ ಕರ್ನಾಟಕದಲ್ಲಿ ಅವರು ಎಲ್ಲಾ ಕಡೆಯೂ ಕೆಲಸ ಮಾಡುವುದಕ್ಕೆ ಅವಕಾಶ ಕೊಡಿ. ಈ ಬಗ್ಗೆ ಅವರಿಗೆ ಹೆಚ್ಚಿನ ಪವರ್ಸ್ ಕೊಟ್ಟು ಹೆಚ್ಚಿನ ಹಣವನ್ನೂ ಸಹ ಕೊಟ್ಟು ಅವರ ಸಮಸ್ಯೆಗಳನ್ನು ಪರಿಹಾರ ಮಾಡಬೇಕು ಎಂದು ಮತ್ತೊಮ್ಮೆ ಹೇಳುತ್ತೇನೆ. ಮತ್ತು ಈ ತಿದ್ದುಪಡಿಯನ್ನು ತಂದಿದ್ದಕ್ಕಾಗಿ ಮತ್ತು ಅಧ್ಯಕ್ಷರು ಈ ಬಗ್ಗೆ ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

MESSAGE FROM THE CHAIRMAN L.C.

ANNOUNCEMENT

MADAM DEPUTY SPEAKER.—I have received the following message from the Chairman, Legislative Council :

"As required by rule 106 of the Rules of Procedure and Conduct of Business in the Karnataka Legislative Council, I send herewith the following Bills which have been agreed to by the Legislative Council, without amendments on 25th August, 1978.

1. The Karnataka State Civil Services, Bill, 1978.
2. The Karnataka Entertainments Tax (Amendment) Bill, 1978."

The House stands adjourned to meet tomorrow at 9.00 A.M.

The House adjourned at Six of the Clock to meet again at Nine of the Clock on Saturday, the 26th August 1978